ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ
ಸೂರ್ಯ ಪ್ರಗತಿ
SURYAPRAGATHI Kannada Daily
ಪ್ರತಿ ಸುದ್ಧಿಯ ಧ್ವನಿ
suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue:67 ಸಂಪುಟ: 05 ಸಂಚಿಕೆ: 67 | Date: 24-03-2026 Tuesday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

# ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ತುಮಕೂರಿನಲ್ಲಿ ರಾಜ್ಯ ಸರ್ಕಾರದ ವಿರುದ್ಧ ಷಡಕ್ಷರೀ ಮುನಿ ಸ್ವಾಮೀಜಿ ಗುಡುಗು....

## ಪಾದಯಾತ್ರೆ ವೇಳೆ ಸ್ವಾಮೀಜಿ.. ಅಸ್ವಸ್ಥ... ॥ ಸಿದ್ದಗಂಗಾ ಆಸ್ಪತ್ರೆಗೆ ದಾಖಲು... ॥ಎಸ್.ಪಿ. ಭೇಟಿ ಆರೋಗ್ಯ ವಿಚಾರಣೆ..॥ ಸಮುದಾಯದ ಭಕ್ತರಲ್ಲಿ ಹೆಚ್ಚಿದ ಆತಂಕ



ತುಮಕೂರು: ಪರಿಶಿಷ್ಟ ಜಾತಿಯಲ್ಲಿ ಬಹು ಸಂಖ್ಯಾತ ರೆನಿಸಿಕೊಂಡಿರುವ ಮಾದಿಗ ಸಮುದಾಯವು 30– 40 ವರ್ಷಗಳಿಂದ ಒಳ ಮೀಸಲಾತಿ ಜಾರಿಗಾಗಿ ಅನೇಕ ಹೋರಾಟ ಪ್ರತಿಭಟನೆಗಳನ್ನ ನಡೆಸಿದ ಪರಿಣಾಮ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ನ ಆದೇಶದಂತೆ ಒಳ ಮೀಸಲಾತಿ ಜಾರಿ ಮಾಡದೆ ರಾಜ್ಯ ಸರ್ಕಾರ ಯಾರದೋ ಒತ್ತಡಕ್ಕೆ ಮಣಿದು ಅವೈಜ್ಞಾನಿಕವಾಗಿ 52,4 32 ಹುದ್ದೆಗಳನ್ನು ಮಾದಿಗರಿಗೆ ಅನ್ಯಾಯ ಮಾಡಿ ಹುದ್ದೆ ತುಂಬಲು ಹೊರಟಿದ್ದ ಬೆನ್ನಲ್ಲೇ ಬೃಹತ್ ಪ್ರತಿಭಟನೆ ನಡೆದ ಕಾರಣ ಮಾರ್ಚ್ 27ಕ್ಕೆ ಒಳ ಮೀಸಲಾತಿ ಚರ್ಚೆಯನ್ನ ಸಂಪುಟ ಸಭೆಯಲ್ಲಿ ಮಂಡಿಸಲು ಹೊರಟಿದ್ದು ಅಂದು ಮಾದಿಗ ಸಮುದಾಯಕ್ಕೆ ಸಂಪೂರ್ಣ ಒಳ ಮೀಸಲಾತಿಯನ್ನು ಜಾರಿ ಮಾಡದೆ ಹೋದರೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಮಾದಿಗರು ದಂಗೆ ಹೇಳುತ್ತಾರೆ ಎಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಆದಿ ಜಾಂಬವ ಬೃಹನ್ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಷಡಕ್ಷರಿ ಮುನಿ ಸ್ವಾಮೀಜಿಗಳವರು ತಿಳಿಸಿದರು.



ದಲಿತ ಸೂರ್ಯನಿಂದ ಖ್ಯಾತರಾದ ಪ್ರೊಫೆಸರ್ ಬಿ ಕೃಷ್ಣಪ್ಪ ಅವರ ಸಮಾಧಿ ಸ್ಥಳದಿಂದ ಪಾದಯಾತ್ರೆ ಕೈಗೊಂಡ ನೆನ್ನೆ ಸಂಜೆ ತುಮಕೂರು ನಗರಕ್ಕೆ ಆಗಮಿಸಿ ಸಿರಾಜ್ ನಲ್ಲಿ ವಾಸ್ತವ್ಯಓಡಿ ನಂತರ ಅಲ್ಲಿಂದ ಟೌನ್ ಹಾಲ್ ಸರ್ಕಲ್ ನ ಅಂಬೇಡ್ಕರ್ ಪ್ರತಿಮೆಗಳಿಗೆ ಪಾದಯಾತ್ರೆಯಲ್ಲಿ ತುಮಕೂರು ಜಿಲ್ಲೆಯ ನೂರಾರು ಮಾದಿಗ ಮುಖಂಡ ರೊಟ್ಟಿಗೆ ಆಗಮಿಸಿದ ಸ್ವಾಮೀಜಿ ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ನಡೆಸಿ ನಂತರ ಮಾತನಾಡಿದರು.

ಸಿದ್ದರಾಮಯ್ಯ ನವರ ಸರ್ಕಾರ ಸಾಮಾಜಿಕ ನ್ಯಾಯದ ಪರವಾಗಿದೆ ಹಸಿದವರಿಗೆ ಅನ್ನ ನೀಡುವ ಬದಲು ಪಟ್ಟಭದ್ರರ ಮಾತಿನಂತೆ ಸಿದ್ದರಾಮಯ್ಯನವರು ಒತ್ತಡಕ್ಕೆ ಮಣಿದು, ಮಾದಿಗರಿಗೆ ಅನ್ಯಾಯ ಮಾಡಲು ಹೊರಟಿದ್ದಾರೆ ಒಳ ಮೀಸಲಾತಿಯ ವಿರೋಧಿಗಳ ಮಾತನ್ನು ಆಲಿಸುತ್ತಿದ್ದಾರೆ 35 ವರ್ಷಗಳಿಂದ ಮೀಸಲಾತಿ ಜಾರಿಗಾಗಿ ಹಸಿದಿರುವ ಮಾದಿಗರಿಗೆ ಅನ್ನ ನೀಡುವ ಸಿದ್ದರಾಮಯ್ಯನವರು ಮಾರ್ಚ್ 27ಕ್ಕೆ ಸಂಪೂರ್ಣ ಹೊಳ ಮೀಸಲಾತಿಯ ಘೋಷಣೆ ಮಾಡದೇ ಹೋದಲ್ಲಿ ಮುಂದಿನ ದಿನದಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಸ್ವಾಮೀಜಿಯವರು ಎಚ್ಚರಿಕೆ ನೀಡಿದರು.

ಒಳ ಮೀಸಲಾತಿ ಜಾರಿಯಾಗದೆ ಹೋದರೆ ರಾಹುಲ್ ಗಾಂಧಿ ಮಲ್ಲಿಕಾರ್ಜುನ ಖರ್ಗೆ ಅವರು ನೇರ ಕಾರಣವಾಗುತ್ತಾರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಚುನಾವಣಾ ಪ್ರಣಾಳಿಕೆಗಳನ್ನು ರೂಪಿಸಿತ್ತು ಇದರಲ್ಲಿ ಅಳಮಿ ಸಲಾತಿಯನ್ನು ಜಾರಿ ಮಾಡುವುದಾಗಿ ಘೋಷಣೆ ಮಾಡಿಕೊಂಡಿತ್ತು ಆದರೆ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರಣಾಳಿಕೆಯ ವಿಚಾರವನ್ನು ಧಿಕ್ಕರಿಸಿದ್ದು ರಾಜ್ಯ ಸರ್ಕಾರದಲ್ಲಿ ಒಳ ಮೀಸಲಾತಿ ಜಾರಿ ಮಾಡುವುದಕ್ಕೆ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ಕೂಡ ಆಡಳಿತ ಸರ್ಕಾರಕ್ಕೆ ಮಾರ್ಗದರ್ಶನ ಮಾಡಬಹುದಿತ್ತು ಆದರೆ ಎಲ್ಲೋ ಒಂದು ಕಡೆ ಸಮುದಾಯದ ಮತಗಳನ್ನು ಪಡೆದ ಇವರು ಹಿಂದೂ ಸಮುದಾಯವನ್ನು ಮರೆತಿದ್ದಾರೆ ಹಾಗಾಗಿ ರಾಜ್ಯದಲ್ಲಿ ಸಂಪೂರ್ಣ ಒಳ ಮೀಸಲಾತಿ ಜಾರಿಯಾಗದೆ ಹೋದರೆ ಮುಂದಿನ ದಿನಗಳಲ್ಲಿ ಸರ್ಕಾರಕ್ಕೆ ಸಮುದಾಯ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು.

ಪಾಲನಹಳ್ಳಿ ಮಠದ ಪೀಠಾಧ್ಯಕ್ಷರಾದ ಡಾಕ್ಟರ್ ಶ್ರೀ ಶ್ರೀ ಸಿದ್ದರಾಜು ಸ್ವಾಮೀಜಿಗಳವರು ಪಾದಯಾತ್ರೆಯಲ್ಲಿ ಪಾಲ್ಗೊಂಡು ಮಾತನಾಡಿ ಸರ್ಕಾರ ಒಳ ಮೀಸಲಾತಿಯನ್ನು ಜಾರಿ ಮಾಡಲು ನಾಗಮೋಹನ್ ದಾಸ ಅವರನ್ನು ನೇಮಕ ಮಾಡಿ ಸಾರ್ವಜನಿಕರ ಹಣವನ್ನ ವ್ಯಯ ಮಾಡಿದೆ ಅದರಿಂದ ಮಾಹಿತಿಯು ಮಾದಿಗರ ಪರವಾಗಿದ್ದರು ಕೊಟ್ಟ ಮಾತಿನಂತೆ ಸರ್ಕಾರ ನಡೆಯುತ್ತಿಲ್ಲ ಪ್ರಣಾಳಿಕೆಯಲ್ಲಿ ತಿಳಿಸಿದಂತೆ ಒಳ ಮೀಸಲಾತಿಯನ್ನು ಜಾರಿ ಮಾಡುವ ಶಕ್ತಿ ರಾಜ್ಯ ಸರ್ಕಾರಕ್ಕೆ ಇಲ್ಲಾ ಈಗಾಗಲೇ ಸಮುದಾಯದ ಮುಖಂಡರು ಅನೇಕ ಬಾರಿ ಪ್ರತಿಭಟನೆ ಸೋಶಿಯಲ್ ಮೀಡಿಯಾ ಸೇರಿದಂತೆ ಇತರೆಡೆ ಕಡೆಗಳಿಂದ ವೈಜ್ಞಾನಿಕವಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡುವ ಸಂದೇಶವನ್ನು ನೀಡಿದ್ದಾರೆ

### ಪಾದಯಾತ್ರೆ ವೇಳೆ ಅಸ್ವಸ್ಥರಾದ ಸ್ವಾಮೀಜಿ



ತುಮಕೂರು ಸಂಪೂರ್ಣ ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ದಲಿತ ಸಮುದಾಯದ ಮುಖಂಡ ಪ್ರೊ.ಬಿ.ಕೃಷ್ಣಪ್ಪ ಸ್ಮಾರಕ ಸ್ಥಳದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್ ವರೆಗೆ ಪಾದಯಾತ್ರೆ ಆರಂಭಿಸಿರುವ ಚಿತ್ರದುರ್ಗ ಜಿಲ್ಲೆ ಹಿರಿಯೂರಿನ ಆದಿ ಜಾಂಭವ ಮಠದ ಪೀಠಾಧ್ಯಕ್ಷ ಷಡಕ್ಷರೀ ಸ್ವಾಮೀಜಿ ಮಾರ್ಗ ಮಧ್ಯೆ ತುಮಕೂರು ನಗರದಲ್ಲಿ ಸಾಗುತ್ತಿದ್ದ ವೇಳೆ ತೀವ್ರ ಅನಾರೋಗ್ಯಕ್ಕೆ ಒಳಗಾದ ಘಟನೆ ನಡೆಯಿತು.

ತುಮಕೂರು ನಗರದ ಮೂಲಕ ಸಾಗುತ್ತಿದ್ದ ವೇಳೆ ಬಿ ಎಚ್ ರಸ್ತೆಯಲ್ಲಿ ರಸ್ತೆ ಮಧ್ಯದಲ್ಲಿಯೇ ಕುಳಿತ ಸ್ವಾಮೀಜಿಯವರನ್ನು ಸಂತೈಸಿದ ಹೋರಾಟಗಾರರು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆದುಕೊಂಡು ಹೋದರು.

ಇದೇ ವೇಳೆ ಪಾದಯಾತ್ರೆಯಲ್ಲಿ ಪಾಲ್ಗೊಂಡ ಮುಖಂಡರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಸುಮಾರು 300 ಕಿಲೋ ಮೀಟರ್ ನಿಂದ ಪಾದಯಾತ್ರೆ ಕೈಗೊಂಡಿರೋ ಷಡಕ್ಷರಿ ಸ್ವಾಮೀಜಿ, ನೂರಾರು ಸಂಖ್ಯೆಯಲ್ಲಿ ಪಾದಯಾತ್ರೆ ಬೆಂಬಲಿಸಿ ಪಾದಯಾತ್ರೆಯಲ್ಲಿ ಪಾಲ್ಗೊಂಡ ಮಾದಿಗ ಮುಖಂಡರು, ರಾಷ್ಟ್ರೀಯ ಹೆದ್ದಾರಿ 4 ರ ಸರ್ವೀಸ್ ರಸ್ತೆ ಯಲ್ಲಿ ಬಿಸಿಲು ಲೆಕ್ಕಿಸದೆ ಹೆಜ್ಜೆ ಹಾಕಿದರು. ಪಾದಯಾತ್ರೆ ಮೂಲಕ ಮಾ.27 ಬೆಂಗಳೂರಿನ ಫ್ರೀಡಂ ಪಾರ್ಕ್ ತಲುಪಲಿರುವ ಷಡಕ್ಷರೀ ಸ್ವಾಮೀಜಿ ಅವರಿಗೆ ತುಮಕೂರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲು ಕರೆದುಕೊಂಡು ಹೋಗಲಾಯಿತು.

### ಸ್ವಾಮೀಜಿ ಅಸ್ವಸ್ಥತೆ ಗೆ ಹಿರಿಯ ವಕೀಲ ಖಂಡನೆ

ಈ ಕುರಿತಂತೆ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ವಕೀಲ ಅರುಣ್ ಕುಮಾರ್ ಮಾತನಾಡಿ, ಮಾದಿಗ ಸಮುದಾಯದ ಹಿರಿಯ ಸ್ವಾಮೀಜಿಯೊಬ್ಬರು ಬೆಂಗಳೂರಿನವರೆಗೂ ಪಾದಯಾತ್ರೆಯಲ್ಲಿ ಹೋಗುತ್ತಿದ್ದರೆ ಸರ್ಕಾರಕ್ಕೆ ಸ್ವಲ್ಪವೂ ಕಾಳಜಿ ಇಲ್ಲದಂತೆ ನಡೆದುಕೊಳ್ಳುತ್ತಿದೆ. ಅವರು ಇಂದು ತುಮಕೂರು ಮಾರ್ಗವಾಗಿ ತೆರಳುತ್ತಿದ್ದ ವೇಳೆ ಕುಸಿದು ಬಿದ್ದಿದ್ದಾರೆ ಅವರಿಗೆ ಪ್ರಾಥಮಿಕ ಪ್ರಾಥಮಿಕ ಚಿಕಿತ್ಸೆ ನೀಡಲು ನಾವು ಮುಂದಾಗಿದ್ದು ನಂತರ ಅವರು ಬೆಂಗಳೂರಿನವರೆಗೂ ಪಾದಯಾತ್ರೆ ಮುಂದುವರಿಸಲಿದ್ದಾರೆ ಎಂದು ಹೇಳಿದರು.

### ಆಸ್ಪತ್ರೆಗೆ ಎಸ್ಪಿ ಭೇಟಿ ಆರೋಗ್ಯ ವಿಚಾರಣೆ



ಪಾದಯಾತ್ರೆ ಯಿಂದ ಬಳಲಿ ಅಸ್ವಸ್ಥರಾದ ಸ್ವಾಂಇಜಿಯವರನ್ನ ಸಿದ್ದಗಂಗಾ ಖಾಸಗಿ ಆಸ್ಪತ್ರೆ ದಾಖಲಿಸಿದ ನಂತರ ತುಮಕೂರು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಸ್ವಾಮೀಜಿ ಆರೋಗ್ಯ ವಿಚಾರಣೆ ಮಾಡಿದರು.



ಮಾದಿಗ ಸಮುದಾಯದ ಮತಗಳಿಂದ ಅಧಿಕಾರಿಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಮಾರ್ಚ್ 27ಕ್ಕೆ ಸಂಪೂರ್ಣ ವಾಳ ಮೀಸಲಾತಿಯ ಅಜೆಂಡವನ್ನ ಘೋಷಣೆ ಮಾಡದೇ ಹೋದರೆ ಮುಂಬರುವ ದಿನಗಳಲ್ಲಿ ಸರ್ಕಾರ ಸಂಕಷ್ಟಕ್ಕೆ ಈಡಾಗುತ್ತದೆ ಎಂದು ತಿಳಿಸಿದರು.

ಮೈಸೂರಿನ ಹಿರಿಯ ವಕೀಲ ಅರುಣ್ ಕುಮಾರ್ ಅವರು ಮಾತನಾಡಿ ಸಾಮಾಜಿಕ ನ್ಯಾಯದ ಪರವಾಗಿರುವ ಸಿದ್ದರಾಮಯ್ಯನವರು ಅವರ ಬಗ್ಗೆ ಮಾದಿಗ ಸಮುದಾಯಕ್ಕೆ ಅಪಾರವಾದ ಗೌರವವಿದೆ ಅನೇಕ ಯೋಜನೆಗಳನ್ನು ಜಾರಿಗೆ ತಂದ ಸಿದ್ದರಾಮಯ್ಯನವರನ್ನು ಪಳಮಿಸಲಾತಿಯನ್ನು ಜಾರಿ ಮಾಡುತ್ತದೆ ಎಂದು ನಂಬಿದೆ ಬರುವ ಮಾರ್ಚ್ 27ಕ್ಕೆ ಸಿದ್ದರಾಮಯ್ಯನವರು ಮಾದಿಗ ಅಥವಾ ವಲಯ ಸಂಬಂಧಿತ ಸಚಿವರು ಮುಖಂಡರನ್ನ ಹೊರತು ಪಡಿಸಿ ಅಡ್ವಕೇಟ್ ಜನರಲ್ , ನಿವೃತ್ತ ನ್ಯಾಯಾಧೀಶ ರು ಸೇರಿದಂತೆ ನಾಗಮೋಹನ್ ದಾಸ ಅವರನ್ನ ಕರೆದು ಒಳ ಮೀಸಲಾತಿ ಜಾರಿಗೆ ಇರುವ ಕಾನೂನಾತ್ಮಕ ಚರ್ಚೆಗಳನ್ನು ತಿಳಿದು ಜಾರಿ ಮಾಡುವುದು ಒಳಿತು ಇಲ್ಲವಾದರೆ ಮುಂಬರುವ ನಾವು ತಗಳಿಗೆ ಮುಖ್ಯಮಂತ್ರಿಗಳು ಕಾರಣರಾಗುತ್ತಾರೆ ಎಂದು ತಿಳಿಸಿದರು.

ಈಗಾಗಲೇ ನಡೆದಿರುವ ಸಂಪುಟ ಸಭೆ ಎಲ್ಲಿ ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರು ಒಳ ಮೀಸಲಾತಿ ಜಾರು ಮಾಡಲು ಚುನಾವಣಾ ನೀತಿ ಸಂಹಿತೆ ಅಡ್ಡ ಬರುತ್ತದೆ ಎಂದು ತಿಳಿಸಿದ್ದಾರೆ ಆದರೆ ಅದು ಇದಕ್ಕೆ ಅನ್ವಯವಾಗುವುದಿಲ್ಲ ಕೇವಲ ರಾಜಕೀಯಕ್ಕಾಗಿ ಬೊಗಳೆ ಬಿಡುವುದನ್ನು ಬಿಟ್ಟು ಮಾದಿಗರಿಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕು ಇವರ ರಾಜಕೀಯಕ್ಕಾಗಿ ಬೊಗಳೆ ಬಿಡುವುದನ್ನು ಬಿಟ್ಟು ಮಾದಿಗರಿಗಾಗಿರುವ ನ್ಯಾಯವನ್ನ ಸರಿಪಡಿಸಬೇಕು ಅದೇ ರೀತಿಯಾಗಿ ಸಾಗರೋಪಾದಿಯಲ್ಲಿ ಸ್ವಾಮೀಜಿಯವರ ಹಣತಿಯಂತೆ ಮಾರ್ಚ್ 27ಕ್ಕೆ ರಾಜ್ಯದ ಮೂಲೆ ಮೂಲೆಯಿಂದ ಮಾದಿಗ ಸಮುದಾಯದ ಜನಾಂಗ ಬರಬೇಕು ಎಂದು ತಿಳಿಸಿದರು.

ಪಾದಯಾತ್ರೆ ಸಂದರ್ಭದಲ್ಲಿ ಜಿಲ್ಲೆಯ ಮಾದಿಗ ಮಾಜಿ ಸಚಿವ ಸೂಗಡು ಶಿವಣ್ಣ, ಸಮುದಾಯದ ಮುಖಂಡರು ನಾಯಕರು ಇತರರು ಭಾಗಿಯಾಗಿದ್ದರು.

# ಸಮಾಜ ಕಲ್ಯಾಣ ಇಲಾಖಾಧಿಕಾರಿ ಆತ್ಮಹತ್ಯೆ ಪ್ರಕರಣ: ಜಂಟಿ ನಿರ್ದೇಶಕ ಕೃಷ್ಣಪ್ಪ ಕೊಟ್ಟ ರೋಚಕ ಹೇಳಿಕೆಯ ಅಂಶ



ತುಮಕೂರು: ಪಾವಗಡದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನಯ್ಯ ಅವರು ನಿವೃತ್ತಿಗೆ ಕೇವಲ 10 ದಿನ ಬಾಕಿ ಇರುವಾಗ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ರಾಜ್ಯಾದ್ಯಂತ ಸಂಚಲನ ಮೂಡಿಸಿದೆ. ಮೃತರ ಡೆತ್ ನೋಟ್ ಮತ್ತು ವಿಡಿಯೋದಲ್ಲಿ ಕೇಳಿಬಂದಿದ್ದ ಗಂಭೀರ ಆರೋಪಗಳ ಬೆನ್ನಲ್ಲೇ, ಈಗ ಆರೋಪಿತ ಅಧಿಕಾರಿ, ತುಮಕೂರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣಪ್ಪ ಅವರು ಮಾಧ್ಯಮಗಳ ಮುಂದೆ ಬಂದು ಸುದೀರ್ಘ ಸ್ಪಷ್ಟನೆ ನೀಡಿದ್ದಾರೆ.

**ಘಟನೆ ದುರದೃಷ್ಟಕರ, ನನ್ನ ಮನಸ್ಸಿಗೆ ನೋವಾಗಿದೆ:**

ಸುದ್ದಿಗಾರರೊಂದಿಗೆ ಮಾತನಾಡಿದ ಜಂಟಿ ನಿರ್ದೇಶಕ ಕೃಷ್ಣಪ್ಪ, 'ಮಲ್ಲಿಕಾರ್ಜುನಯ್ಯ ಅವರು ನನ್ನ ಸಹೋದ್ಯೋಗಿ ಮಿತ್ರರು. ಅವರು ಕಚೇರಿಯಲ್ಲೇ ಆತ್ಮ*ಹತ್ಯೆ ಮಾಡಿಕೊಂಡ ವಿಷಯ ತಿಳಿದು ನನಗೆ ತುಂಬಾ ಆಘಾತವಾಗಿದೆ. ಕೇವಲ 10 ದಿನಗಳ ಸೇವಾವಧಿ ಬಾಕಿ ಇರುವಾಗ ಅವರು ಈ ರೀತಿಯ ನಿರ್ಧಾರ ಮಾಡಬಾರದಿತ್ತು. ನಿವೃತ್ತಿಯ ನಂತರ ಅವರು ಸುಖವಾಗಿ ಜೀವನ ನಡೆಸಬಹುದಿತ್ತು. ಅವರ ಸಾವು ಅತ್ಯಂತ ದುರದೃಷ್ಟಕರ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

**ಶೇ. 1 ರಷ್ಟು ಕಿರುಕುಳ ನೀಡಿಲ್ಲ:**

ಮಲ್ಲಿಕಾರ್ಜುನಯ್ಯ ಅವರು ಮಾಡಿರುವ ಕಿರುಕುಳದ ಆರೋಪವನ್ನು ಕೃಷ್ಣಪ್ಪ ಅವರು ಸಾರಾಸಗಟಾಗಿ ತಳ್ಳಿಹಾಕಿದ್ದಾರೆ. 'ನಾನು ವೈಯಕ್ತಿಕವಾಗಿ ಮಲ್ಲಿಕಾರ್ಜುನಯ್ಯ ಅವರಿಗೆ ಶೇ. 1 ರಷ್ಟು ಕೂಡ ತೊಂದರೆ ನೀಡಿಲ್ಲ. ನಾನು ಅವರ ಕಚೇರಿಗೆ ಭೇಟಿ ನೀಡಿ ಅವರಿಗೆ ನೋಟಿಸ್ ನೀಡಿದ ಅಥವಾ ಕಿರುಕುಳ ನೀಡಿದ ಒಂದೇ ಒಂದು ಉದಾಹರಣೆ ಇಲ್ಲ. ಪಾವಗಡ ಕಚೇರಿಯ ಸಿಬ್ಬಂದಿ ಅಥವಾ ಅಲ್ಲಿನ ನಿಲಯ ಪಾಲಕರನ್ನು ಕೇಳಿದರೆ ಸತ್ಯಾಂಶ ತಿಳಿಯುತ್ತದೆ. ನಾನು ಇಡೀ ಜಿಲ್ಲೆಯ ಎಲ್ಲಾ ಸಿಬ್ಬಂದಿಯೊಂದಿಗೆ ಕುಟುಂಬದ ಸದಸ್ಯನಂತೆ ಕೆಲಸ ಮಾಡುತ್ತಾ ಬಂದಿದ್ದೇನೆ' ಎಂದು ಹೇಳಿದ್ದಾರೆ.

**ತನಿಖೆಗೆ ಪತ್ರ ಬರೆದಿದ್ದು ನಿಜ, ಆದರೆ ಅದು ಕರ್ತವ್ಯ:**

ಅಧಿಕಾರಿ ಮಲ್ಲಿಕಾರ್ಜುನಯ್ಯ ಅವರ ವಿರುದ್ಧ ಕೇಳಿಬಂದಿದ್ದ ಕೆಲವು ಅಕ್ರಮಗಳ ದೂರಿನ ಹಿನ್ನೆಲೆಯಲ್ಲಿ ಮೇಲಾಧಿಕಾರಿಗಳ ಸೂಚನೆಯಂತೆ ನಾನು ಪತ್ರ ಬರೆದಿದ್ದು ನಿಜ ಎಂದು ಕೃಷ್ಣಪ್ಪ ಒಪ್ಪಿಕೊಂಡಿದ್ದಾರೆ. 'ಮೇಲಾಧಿಕಾರಿಗಳಿಂದ ಬಂದ ಅರ್ಜಿಯ ಆಧಾರದ ಮೇಲೆ ತನಿಖೆ ನಡೆಸಲು ಇಬ್ಬರು ಸಿಬ್ಬಂದಿಯನ್ನು ನೇಮಕ ಮಾಡಿ ಪತ್ರ ಬರೆದಿದ್ದೆ. ಅದನ್ನು ಹೊರತುಪಡಿಸಿ ನಾನು ಯಾವುದೇ ಮಾನಸಿಕ ಕಿರುಕುಳ ನೀಡಿಲ್ಲ. ತನಿಖೆಗಾಗಿ ನಾನು ಅವರ ಕಚೇರಿಗೆ ಒಮ್ಮೆಯೂ ಭೇಟಿ ನೀಡಿರಲಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

**ಪೆನ್ಷನ್ ದಾಖಲೆಗಳನ್ನ ನಾನೇ ದೃಢೀಕರಿಸಿದ್ದೆ:**

ಇನ್ನೊಂದು ಪ್ರಮುಖ ಅಂಶವನ್ನು ಬಿಚ್ಚಿಟ್ಟ ಕೃಷ್ಣಪ್ಪ, 'ಮಲ್ಲಿಕಾರ್ಜುನಯ್ಯ ಅವರ ನಿವೃತ್ತಿಗೆ 10 ದಿನಗಳಷ್ಟೇ ಬಾಕಿ ಇತ್ತು. ಅವರ ಪೆನ್ಷನ್‌ಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನೇ ಸ್ವತಃ ಪರಿಶೀಲಿಸಿ, ದೃಢೀಕರಿಸಿ ಮೂರು ತಿಂಗಳ ಹಿಂದೆಯೇ ಕಳುಹಿಸಿಕೊಟ್ಟಿದ್ದೇನೆ. ಅವರ ನಿವೃತ್ತಿ ಸೌಲಭ್ಯಗಳನ್ನು ತಡೆಯುವ ಯಾವುದೇ ಉದ್ದೇಶ ಅಥವಾ ಅಧಿಕಾರ ನನಗಿರಲಿಲ್ಲ. ಹೀಗಿದ್ದರೂ ಅವರು ಯಾವ ಉದ್ದೇಶಕ್ಕೆ ನನ್ನ ಹೆಸರನ್ನು ಪ್ರಸ್ತಾಪಿಸಿ ವಿಡಿಯೋ ಮಾಡಿದ್ದಾರೋ ಎಂಬುದು ನನಗೆ ತಿಳಿಯುತ್ತಿಲ್ಲ' ಎಂದು ಪ್ರಶ್ನಿಸಿದ್ದಾರೆ.

**ಸಾವಿನ ಹಿಂದಿರೋ ಉದ್ದೇಶ ಬೇರೆಯದ್ದೇ ಇರಬಹುದು?**

ತಮ್ಮ ಮೇಲಿನ ಆರೋಪದಿಂದ ಮುಕ್ತರಾಗಲು ಕೃಷ್ಣಪ್ಪ ಅವರು ಹಿರಿಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ. 'ಇದರ ಹಿಂದೆ ಯಾವುದೋ ದುರುದ್ದೇಶ ಇರುವಂತೆ ಕಾಣುತ್ತಿದೆ. ಮಲ್ಲಿಕಾರ್ಜುನಯ್ಯ ಅವರು ಮೊದಲೇ ಅನುಕಂಪದ ಆಧಾರದಲ್ಲಿ ಕೆಲಸ ಪಡೆದಿದ್ದರು. ಇದೀಗ ನಿವೃತ್ತಿಗೆ 10 ದಿನಗಳು ಬಾಕಿ ಇರುವಾಗ ತಾವು ನೇಣಿಗೆ ಶರಣಾಗಿರುವುದರ ಹಿಂದೆಯೂ ಬೇರೆಯದೇ



ಉದ್ದೇಶವೂ ಇರಬಹುದು. ಈ ಹಿನ್ನೆಲೆಯಲ್ಲಿ ಅವರ ಸಾವಿನ ಬಗ್ಗೆ ಹಾಗೂ ನನ್ನ ಮೇಲಿನ ಆರೋಪಗಳ ಬಗ್ಗೆ ಸಮಗ್ರ ತನಿಖೆಯಾಗಲಿ. ಮಲ್ಲಿಕಾರ್ಜುನಯ್ಯ ಅವರ ಸಾವಿನಲ್ಲಿ ನನ್ನ 1% ಹಸ್ತಕ್ಷೇಪವೂ ಇಲ್ಲ ಎಂದು ನನ್ನ ಆತ್ಮಸಾಕ್ಷಿಯಿಂದ ಹೇಳುತ್ತಿದ್ದೇನೆ ಎಂದು ಕೃಷ್ಣಪ್ಪ ತಿಳಿಸಿದ್ದಾರೆ.

ಮಲ್ಲಿಕಾರ್ಜುನಯ್ಯ ಅವರ ಆತ್ಮ*ಹತ್ಯೆಯ ಹಿಂದೆ ಹಿರಿಯ ಅಧಿಕಾರಿಯ ಕಿರುಕುಳವಿದೆಯೇ ಅಥವಾ ಇಲಾಖೆಯೊಳಗಿನ ಬೇರೆ ಯಾವುದಾದರೂ ಒತ್ತಡಗಳಿವೆಯೇ ಎಂಬುದು ಈಗ ಪೊಲೀಸ್ ತನಿಖೆಯಿಂದಷ್ಟೇ ಹೊರಬರಬೇಕಿದೆ.

# ನೇಕಾರರ ಸಮುದಾಯದ ಅಭಿವೃದ್ಧಿಗೆ ನೆರವು – ಶಾಸಕ ಜಿ.ಬಿ. ಜ್ಯೋತಿಗಣೇಶ್

ತುಮಕೂರು: ರೈತರು ಮತ್ತು ನೇಕಾರರು ಈ ದೇಶದ ಎರಡು ಕಣ್ಣುಗಳಿದ್ದಂತೆ ಎಂಬುದು ಹಲವು ಹಿರಿಯರ ಅಭಿಪ್ರಾಯವಾಗಿದೆ. ನೇಕಾರರ ಸಮುದಾಯದ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವನ್ನು ನೀಡಲಾಗುತ್ತಿದೆ ಎಂದು ತುಮಕೂರು ನಗರ ಶಾಸಕ ಜಿ.ಬಿ.ಜೋತಿಗಣೇಶ್ ತಿಳಿಸಿದ್ದಾರೆ.

ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ ಹಾಗೂ ತುಮಕೂರು ಜಿಲ್ಲಾ ದೇವಾಂಗ ಸಂಘ(ರಿ), ತುಮಕೂರು ಜಿಲ್ಲಾ ಕುರುಹಿನ ಶೆಟ್ಟಿ ಸಂಘ(ರಿ), ತುಮಕೂರು ಜಿಲ್ಲಾ ಪದ್ಮಶಾಲಿ ಸಂಘ(ರಿ), ತುಮಕೂರು ಜಿಲ್ಲಾ ತೊಗಟವೀರ ಸಂಘ(ರಿ), ಇವರುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಶ್ರೀ ದೇವರ ದಾಸಿಮಯ್ಯ ನವರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ತುಮಕೂರು ನಗರದಲ್ಲಿರುವ ವಿವಿಧ ನೇಕಾರರ ಸಂಘಗಳ ಹಾಸ್ಟಲ್, ದೇವಾಲಯ, ಸಮುದಾಯ ಭವನಗಳಿಗೆ ಅನುದಾನ ನೀಡಲಾಗಿದೆ. ಇನ್ನೂ ಕೆಲವು ಕಾಮಗಾರಿಗಳಿಗೆ ಅನುದಾನ ಕೇಳಿದ್ದಾರೆ. ಅದನ್ನು ಆದ್ಯತೆಯಾಗಿ ಪರಿಗಣಿಸಲಾಗುವುದು ಎಂದರು.



ಕಲ್ಯಾಣ ಕ್ರಾಂತಿಯ ವೇಳೆ ಅನುಭವ ಮಂಟಪದಲ್ಲಿದ್ದ ಪ್ರಮುಖರಲ್ಲಿ ಶ್ರೀ ದೇವರ ದಾಸಿಮಯ್ಯ ಕೂಡ ಒಬ್ಬರು. ಅವರ ಆದರ್ಶಗಳನ್ನು ನಾವೆಲ್ಲರೂ ಪಾಲಿಸಬೇಕಿದೆ. ಎಲ್ಲರೂ ಒಗ್ಗೂಡಿ ಸಮಾಜದ ಒಳಿತಿಗಾಗಿ ದುಡಿಯೋಣ. ಆದೇ ಮಹನೀಯರಿಗೆ ನೀಡುವ ಗೌರವ ಎಂದು ನುಡಿದರು.

ತಹಶೀಲ್ದಾರ್ ರಾಜೇಶ್ವರಿ ಮಾತನಾಡಿ, ನೇಕಾರರ ಸಮುದಾಯ ಬಹಳ ಶ್ರಮಜೀವಿ ಸಮುದಾಯ. ಮಾನವ ಸಂಘ ಜೀವಿಯಾಗಿ ಬದುಕಲು ಈ ಸಮುದಾಯವೂ ಒಂದು ಕಾರಣ. ಈ ಸಮುದಾಯದ ಹಿರಿಯರಾದ ಶ್ರೀ ದೇವರ ದಾಸಿಮಯ್ಯ ಅವರ ಆದರ್ಶಗಳನ್ನು ನಾವೆಲ್ಲರೂ ಪಾಲಿಸುವ ಕೆಲಸ ಮಾಡಬೇಕು ಎಂದರು.

ತುಮಕೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಧನಿಯಕುಮಾರ್ ಮಾತನಾಡಿ, ನೇಕಾರರಾದ ನಾವು ಭಾರತದ ಧ್ವಜವನ್ನು ಮಾಡಿದ್ದೇವೆ. ನೇಕಾರರಿಗೆ ಶಿಕ್ಷಣ ತುಂಬಾ ಮುಖ್ಯ. ತುಮಕೂರಿನಲ್ಲಿ ಯಾವುದಾದರೂ ಒಂದು ವೃತ್ತಕ್ಕೆ ದೇವರ ದಾಸಿಮಯ್ಯ ವೃತ್ತ ಎಂದು ಹೆಸರಿಡಬಹುದು. ಇದನ್ನು ಎಲ್ಲರೂ ಸೇರಿ ಒಗ್ಗಟ್ಟಿನಿಂದ ಮಾಡಿಸೋಣ. ನೇಕಾರರ ಸಮುದಾಯದವರು ಒಟ್ಟಾಗಿ ದೇವರ ದಾಸಿಮಯ್ಯನ ಹೆಸರಿನಲ್ಲಿ ಸಮುದಾಯಭವನ ನಿರ್ಮಿಸಿದರೆ ಬಡವರ ಮದುವೆ, ಇನ್ನಿತರ ಶುಭ ಕಾರ್ಯಗಳನ್ನು ಆಚರಿಸಲು ಒಂದು ಜಾಗ ದೊರೆಯಲಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್.ಸಿದ್ದಲಿಂಗಪ್ಪ ಮಾತನಾಡಿ, ನಿಜಶರಣ ದೇವರ ದಾಸಿಮಯ್ಯ 12ನೇ ಶತಮಾನದ ಶರಣ ಚಳವಳಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದವರು. ಅವರ ಹಲವಾರು ವಚನಗಳು ಲಭ್ಯವಿದ್ದು, ಅವುಗಳು ಸಮಾಜದ ಅಂಕು, ಡೊಂಕುಗಳನ್ನು ತಿದ್ದುವ, ಸಮಾಜವನ್ನು ಸರಿದಾರಿಗೆ ತರುವ ಕೆಲಸವನ್ನು ಮಾಡುತ್ತಿವೆ. ಅಂತಹ ಆದರ್ಶ ಮಹನೀಯರ ಜಯಂತಿಯನ್ನು ನಾವೆಲ್ಲರೂ ಒಗ್ಗೂಡಿ ಆಚರಿಸುತ್ತಿರುವುದು ಸಂತೋಷದ ವಿಚಾರ ಎಂದರು.

ನಿವೃತ್ತ ಉಪನ್ಯಾಸಕರಾದ ಆರ್. ಮಲ್ಲಿಕಾರ್ಜುನಯ್ಯ ಶ್ರೀದೇವರ ದಾಸಿಮಯ್ಯ ಅವರ ಕುರಿತು ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಈಶ್ವರ್ ಕು. ಮಿರ್ಜಿ, ಮೇಲ್ವಿಚಾರಕ ಸುರೇಶಕುಮಾರ್ ಸೇರಿದಂತೆ ವಿವಿಧ ಸಮುದಾಯದ ಮುಖಂಡರು, ಮತ್ತಿತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಮುದಾಯದ ಹಿತಕ್ಕಾಗಿ ದುಡಿದ ಐವರನ್ನು ಜಿಲ್ಲಾಡಳಿತದಿಂದ ಗೌರವಿಸಲಾಯಿತು.

# ಒಳ ಮೀಸಲಾತಿ ಇಲ್ಲದೆ ಸರಕಾರಿ ಉದ್ಯೋಗ ವಿರೋಧಿಸಿ ಮಾ.25ರಂದು 31 ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಬೃಹತ್ ಪ್ರತಿಭಟನೆ

ತುಮಕೂರು– ಒಳ ಮೀಸಲಾತಿ ಇಲ್ಲದೆ ಸರಕಾರಿ ಉದ್ಯೋಗ ನೇಮಕ ಮಾಡಲು ಆದೇಶ ಹೊರಡಿಸಿರುವ ಸರಕಾರದ ಕ್ರಮವನ್ನು "ಮಾದಿಗ ಸಂಘಟನೆಗಳ ಒಕ್ಕೂಟ" ವಿರೋಧಿಸಿ,ಮಾ.25 ರಂದು ರಾಜ್ಯದ ಎಲ್ಲಾ 31 ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಬೃಹತ್ ಪ್ರತಿಭಟನೆ ಹಾಗೂ ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲು ತೀರ್ಮಾನಿಸಿದೆ ಎಂದು ಪಾಲನಹಳ್ಳಿ ಮಠದ ಶ್ರೀಸಿದ್ಧರಾಜು ಸ್ವಾಮಿಜಿಗಳು ತಿಳಿಸಿದ್ದಾರೆ.

ಮಾದಿಗ ಸಂಘಟನೆಗಳ ಒಕ್ಕೂಟದಿಂದ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದ ಅವರು,35 ವರ್ಷಗಳಿಂದ ರಾಜ್ಯಾದ್ಯಂತ ನಿರಂತರ ಹೋರಾಟ ನಡೆಸಿದ್ದೇವೆ. ಸುಪ್ರೀಂ ಕೋರ್ಟ್ ಪರಿಶಿಷ್ಟ ಮೀಸಲಾತಿ ವರ್ಗೀಕರಿಸಲು ರಾಜ್ಯ ಸರಕಾರಕ್ಕೆ ಅಧಿಕಾರವಿದೆ ಎಂದು ಐತಿಹಾಸಿಕ ತೀರ್ಪು ನೀಡಿತು ಹಾಗೂ ಸರಕಾರ ದತ್ತಾಂಶ ಸಂಗ್ರಹಿಸಿ ವರ್ಗೀಕರಿಸಲಿ ಎಂದು ಐತಿಹಾಸಿಕ ತೀರ್ಪು ನೀಡಿತು. ರಾಜ್ಯ ಸರಕಾರ ನಿ.ನ್ಯಾ,ನಾಗಮೋಹನ್ ದಾಸ್ ಆಯೋಗ ರಚಿಸಿ ವರದಿ ಪಡೆದು ಸಚಿವ ಸಂಪುಟದಲ್ಲಿ ಅನುಮೋಧಿಸಿತು. ಆ ನಂತರ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಮಸೂದೆ ಅಂಗೀಕರಿಸಿ ರಾಜ್ಯಪಾಲರ ಸಹಿ ನಂತರ ವಿಧೇಯಕವಾಗಿದೆ.ಆದರೆ ಸರಕಾರ ಯಾರೋ ಕೆಲವರು ಮಾಡುವ ವಿರೋಧವನ್ನು ಪರಿಗಣಿಸಿ, ಬಹುಸಂಖ್ಯಾತರಾಗಿರುವ ಮಾದಿಗರ ಹಿತವನ್ನು ಕಡೆಗಣಿಸುತ್ತಿದೆ.ಸರಕಾರದ ನಡೆಯನ್ನು ವಿರೋಧಿಸಿ



ಮಾಚ್.25ರಂದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿಯ ಜೊತೆಗೆ, ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಮನೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕೋಡಿಹಳ್ಳಿ ಆದಿ ಜಾಂಭವ ಮಠದ ಶ್ರೀಶಿವಮುನಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ,ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರ ಮಾದಿಗ ವಿರೋಧಿಯಾಗಿದೆ.ಕಾಂಗ್ರೆಸ್ ಸರಕಾರ ಆರಂಭದಿಂದಲು ಒಳಮೀಸಲಾತಿ ಸರಕಾರ ಹಾಗೂ ಮುಖ್ಯಮಂತ್ರಿ ಮಾನ್ಯ ಶ್ರೀ.ಸಿದ್ಧರಾಮಯ್ಯನವರು ಒಳಮೀಸಲಾತಿ ವಿರೋಧಿಗಳ ರಾಜಕೀಯ ಒತ್ತಡದ ಪ್ರಭಾವಕ್ಕೆ ಒಳಗಾಗಿದ್ದಾರೆ. ಒಳಮೀಸಲಾತಿ ಜಾರಿ ಮಾಡಲು ವಿಶೇಷ ಸಚಿವ ಸಂಪುಟದ ದೀರ್ಘ ಚರ್ಚೆಯ ಅಗತ್ಯವಿಲ್ಲ. ಯಾವ ಕೋರ್ಟ್ ತಡೆಯಾಜ್ಞೆ ಹಾಗೂ ತಾಂತ್ರಿಕ ಅಡಚಣೆಗಳಿಲ್ಲ. ಅಡಚಣೆ ಇರುವುದು ಸರಕಾರದಲ್ಲಿ ಆದ್ದರಿಂದ ಮುಖ್ಯಮಂತ್ರಿಗಳು ಸಮರ್ಥ ಹಾಗೂ ನಿಷ್ಟುರ ನಿರ್ಧಾರ ಮಾಡಬೇಕಿದೆ. ಒಳಮೀಸಲಾತಿ ವಿರೋಧಿಗಳ ಷಡ್ಯಂತ್ರದಿಂದ ಸರಕಾರ ವಿಳಂಭ ಧೋರಣೆ ಅನುಸರಿಸಿದೆ. ಹಾಗಾಗಿ ಒಳಮೀಸಲಾತಿ ಜಾರಿ ವಿರುದ್ಧದ ಧ್ವನಿಗಟ್ಟಿಗೊಳಿಸಿ ಮತ್ತಷ್ಟು ಕಗ್ಗಂಟಾಗಿಸಿ ವಿವಾದವನ್ನು ಉಲ್ಲಣಗೊಳಿಸಿದೆ.ಸರಕಾರ ಮಾರ್ಚ್ 27 ರ ಸಚಿವ ಸಂಪುಟದ ಸಭೆಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳದಿದ್ದರೆ, ಆದಿಜಾಂಭವ ಸಮುದಾಯಕ್ಕೆ ಸೇರಿದ ಎಲ್ಲಾ ಮಠಾಧೀಶರು ಒಗ್ಗೂಡಿ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದರು.

ಆರ್.ಪಿ.ಐನ ರಾಷ್ಟ್ರೀಯ ಅಧ್ಯಕ್ಷ ಹಾಗೂ ಡಿಎಸ್‌ಎಸ್ ನ ರಾಜ್ಯಾಧ್ಯಕ್ಷ ಡಾ.ಎನ್.ಮೂರ್ತಿ ಮಾತನಾಡಿ,ಸಂವಿಧಾನ ವಿರೋಧಿಸುವವರು ಹಾಗೂ ಒಳ ಮೀಸಲಾತಿ ಬಿ.ಆರ್.ಅಂಬೇಡ್ಕರ್ ರವರಿಗೆ ಅಪಮಾನ ಮಾಡುತ್ತಿದ್ದಾರೆ. ಒಳಮೀಸಲಾತಿ ಜಾರಿ ಮಾಡದೆ ಉದ್ಯೋಗ ನೇಮಕಾತಿ ಮಾಡುವುದು ಅಸಂವಿಧಾನಿಕ, ಅವೈಜ್ಞಾನಿಕ ಹಾಗೂ ಕಾನೂನು ಬಾಹಿರವಾಗಿದೆ. ಒಳ ಮೀಸಲಾತಿಯಿಲ್ಲದೆ ಉದ್ಯೋಗ ನೇಮಕಾತಿ ಮಾಡುವುದು ಮಾದಿಗ ಸಮುದಾಯಕ್ಕೆ ಮರಣ ಶಾಸನವಾಗಿದೆ.ಉದ್ಯೋಗ ನೇಮಕಾತಿಗಳಲ್ಲಿ ಒಳಮೀಸಲಾತಿ ಅಳವಡಿಸಿ 101 ಪರಿಶಿಷ್ಟ ಜಾತಿಗಳಿಗೆ ಅಯಾ ಜಾತಿಗಳ ಜನಸಂಖ್ಯೆಗನುಗುಣವಾಗಿ ಉದ್ಯೋಗ ಹಂಚಿಕೆ ಮಾಡಿ ಸಾಮಾಜಿಕ ನ್ಯಾಯ ಕಲ್ಪಿಸಲಿ. ಆದ್ದರಿಂದ ಮಾದಿಗ ಹಾಗೂ ಸಂಬಂಧಿತ ಜಾತಿಗಳ 50ಕ್ಕೂ ಹೆಚ್ಚು ಸಂಘಟನೆಗಳು ಒಟ್ಟಿಗೆ ರಚಿಸಿರುವ ಮಾದಿಗ ಸಂಘಟನೆ ಒಕ್ಕೂಟದ ನೇತೃತ್ವದಲ್ಲಿ ಜಂಟಿಯಾಗಿ ಮಾರ್ಚ್ 25 ರಂದು ರಾಜ್ಯಾದ್ಯಂತ ಎಲ್ಲಾ 31 ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಭಾರಿ ಬೃಹತ್ ಪ್ರತಿಭಟನೆ ಹಾಗೂ ಬೆಂಗಳೂರಿನಲ್ಲಿ ಮೌರ್ಯವೃತ್ತ (ಗಾಂಧಿ ಪ್ರತಿಮೆ) ಗಾಂಧಿನಗರ ಇಲ್ಲಿಂದ ಬೆಳಗ್ಗೆ ಮುಖ್ಯಮಂತ್ರಿಗಳವರ ನಿವಾಸಕ್ಕೆ ಭಾರಿ ರ?ಯಾಲಿ ನಡೆಸಿ ಮುಖ್ಯಮಂತ್ರಿಗಳ ಮನೆಗೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾದಿಗ ದಂಡೋರ ಮುಖಂಡರಾದ ಕೃಷ್ಣಪ್ಪ, ಗೌರವಾಧ್ಯಕ್ಷ ಕೇಶವಮೂರ್ತಿ, ಡಾ.ಭೀಮರಾಜು, ಪಿ.ಎನ್. ರಾಮಯ್ಯ, ಸಿದ್ದರಾಜು, ಮಂಜುನಾಥ್.ಜಿ.ಕೆ, ಭೈಲಹೊನ್ನಯ್ಯ, ಹುಸೇನಪ್ಪಸ್ವಾಮಿ, ಶಿವರಾಜ್ ಅಕ್ಕರಕ್ಕಿ ಮುನಿರಾಜು, ಜಗದೀಶ್, ಎ.ಸುನಿಲ್, ಹರಿನಾಥ್, ಎ.ನಾಗೇಶ್, ಚಂದ್ರಯ್ಯ, ಗೌರಮ್ಮ, ಲಕ್ಷ ?ಮಮ್ಮ, ಮಂಜುನಾಥ್, ರಂಗನಾಥ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಕೋಮಾ ಸ್ಥಿತಿಯಲ್ಲಿ ಹಾಸಿಗೆಯಲ್ಲೇ ಅಚೇತನವಾಗಿ ಮಲಗಿಸುವ ಕೋಮಾ ಮತ್ತು ಬ್ರೈನ್ ಡೆಡ್ಗೂ ಏನೆಲ್ಲಾ ವ್ಯತ್ಯಾಸ..?

ಹರೀಶ್ ರಾಣಾ ಸುಮಾರು 13 ವರ್ಷಗಳಿಂದ ಹಾಸಿಗೆಯ ಮೇಲೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಮಲಗಿದ್ದರು. ಈಗ ಸುಪ್ರೀಂ ಕೋರ್ಟ್ ಅವರಿಗೆ ದಯಾಮರಣಕ್ಕೆ ಅನುಮತಿ ನೀಡಿದೆ. ಆದರೆ ಈ ಪ್ರಕರಣವು ಕೆಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಕೋಮಾ ಮತ್ತು ಬ್ರೈನ್ ಡೆಡ್ ನಡುವಿನ ವ್ಯತ್ಯಾಸವೇನು, ಕೋಮಾದಲ್ಲಿ ಏನಾಗುತ್ತದೆ ಮತ್ತು ಅದು ಮೆದುಳು ನಿಷ್ಕ್ರಿಯವಾಗುವುದಕ್ಕಿಂತ ಹೇಗೆ ಭಿನ್ನವಾಗಿದೆ? ಈ ಎರಡು ಪರಿಸ್ಥಿತಿಗಳಲ್ಲಿ ವೈದ್ಯಕೀಯ ಹಾಗೂ ಕಾನೂನು ನಿರ್ಧಾರಗಳು ಏಕೆ ಬೇರೆಬೇರೆ ಆಗಿರುತ್ತವೆ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಈ ಬಗ್ಗೆ ಮತ್ತಷ್ಟು ಮಾಹಿತಿ ಸ್ಟೋರಿಯಲ್ಲಿದೆ.

ಬಹು ವರ್ಷಗಳಿಂದ ಕೋಮಾ ಸ್ಥಿತಿಯಲ್ಲಿ ಹಾಸಿಗೆಯಲ್ಲೇ ಅಚೇತನವಾಗಿ ಮಲಗಿದ್ದ ಹರೀಶ್ ರಾಣಾಗೆ ಸುಪ್ರೀಂ ಕೋರ್ಟ್ ದಯಾಮರಣಕ್ಕೆ ಅನುಮತಿ ನೀಡಿದೆ. ಈ ಹಿನ್ನೆಲೆಯಲ್ಲಿ ಕೋಮಾ ಮತ್ತು ಬ್ರೈನ್ ಡೆಡ್ ಎಂಬ ಎರಡು ವೈದ್ಯಕೀಯ ಸ್ಥಿತಿಗಳ ಬಗ್ಗೆ ಚರ್ಚೆ ಹೆಚ್ಚಾಗಿದೆ. ಇವು ಎರಡೂ ಗಂಭೀರ ಸ್ಥಿತಿಗಳಾಗಿದ್ದರೂ, ವೈದ್ಯಕೀಯ ಹಾಗೂ ಕಾನೂನು ದೃಷ್ಟಿಯಿಂದ ದೊಡ್ಡ ವ್ಯತ್ಯಾಸಗಳಿವೆ. ಈ ಪ್ರಕರಣದಿಂದ ಒಂದು ಪ್ರಮುಖ ಪ್ರಶ್ನೆ ಎದುರಾಗಿದೆ. ಹರೀಶ್ ರಾಣಾ ಸುಮಾರು 13 ವರ್ಷಗಳಿಂದ ಕೋಮಾ ಸ್ಥಿತಿಯಲ್ಲಿ ಹಾಸಿಗೆಯಲ್ಲೇ ಇದ್ದು, ಎಐಐಎಂಎಸ್ ವೈದ್ಯರ ಮೆಡಿಕಲ್ ಬೋರ್ಡ್ ಅವರು ಪರಿಶೀಲಿಸಿ, ಅವರ ಚೇತರಿಕೆಯ ಸಾಧ್ಯತೆ ಇಲ್ಲ ಎಂದು ತಿಳಿಸಿತ್ತು. ಹಾಗಾಗಿ ದಯಾಮರಣಕ್ಕೆ ನ್ಯಾಯಾಲಯದ ಅನುಮತಿ ಅಗತ್ಯವಾಯಿತು. ಆದರೆ ಯಾರಾದರೂ "ಬ್ರೈನ್ ಡೆಡ್" ಆಗಿದ್ದರೆ ಸಾಮಾನ್ಯವಾಗಿ ನ್ಯಾಯಾಲಯದ ಅನುಮತಿ ಬೇಕಾಗುವುದಿಲ್ಲ.






ಅಂತಹ ಸಂದರ್ಭಗಳಲ್ಲಿ ಬೇರೆ ವಿಧಾನ ಅನುಸರಿಸಲಾಗುತ್ತದೆ ಮತ್ತು ಅಂಗದಾನಕ್ಕೂ ಅನುಮತಿ ನೀಡಬಹುದು. ಆದರೆ ಕೋಮಾ ಮತ್ತು ಬ್ರೈನ್ ಡೆಡ್ ನಡುವಿನ ವ್ಯತ್ಯಾಸವೇನು, ಈ ಎರಡು ಪರಿಸ್ಥಿತಿಗಳಲ್ಲಿ ವೈದ್ಯಕೀಯ ಹಾಗೂ ಕಾನೂನು ನಿರ್ಧಾರಗಳು ಏಕೆ ಬೇರೆಬೇರೆ ಆಗಿರುತ್ತವೆ ಎಂಬುದನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಈ ಬಗ್ಗೆ ಮತ್ತಷ್ಟು ಮಾಹಿತಿ ಸ್ಟೋರಿಯಲ್ಲಿದೆ.

### ಕೋಮಾ ಎಂದರೇನು?

ಸಾಮಾನ್ಯವಾಗಿ ಕೋಮಾ ಎನ್ನುವುದು ಗಂಭೀರವಾದ ಮೆದುಳಿನ ಸ್ಥಿತಿ. ಈ ಸಂದರ್ಭದಲ್ಲಿ ವ್ಯಕ್ತಿ ಗಾಢ ಅಚೇತನ ಸ್ಥಿತಿಗೆ ಹೋಗುತ್ತಾನೆ. ಅವನು ಕಣ್ಣು ತೆರೆಯಲು ಸಾಧ್ಯವಿಲ್ಲ, ಮಾತನಾಡಲು ಸಾಧ್ಯವಿಲ್ಲ ಮತ್ತು ದೇಹದ ಚಲನೆಯೂ ಇರುವುದಿಲ್ಲ. ಆದರೆ ಈ ಸ್ಥಿತಿಯಲ್ಲಿ ಮೆದುಳಿನ ಕೆಲವು ಭಾಗಗಳು ಇನ್ನೂ ಕಾರ್ಯನಿರ್ವಹಿಸುತ್ತಿರುತ್ತವೆ. ರೋಗಿ ಉಸಿರಾಡುತ್ತಿರುತ್ತಾನೆ ಅವನ ಹೃದಯದ ಬಡಿತ ನಿಂತಿರುವುದಿಲ್ಲ. ಕೆಲವರು ಕೆಲವು ದಿನಗಳು, ವಾರಗಳು ಅಥವಾ ತಿಂಗಳುಗಳ ನಂತರ ಕೋಮಾದಿಂದ ಹೊರಬರುವ ಸಾಧ್ಯತೆ ಇರುತ್ತದೆ. ಕೆಲ ಸಂದರ್ಭಗಳಲ್ಲಿ ವರ್ಷಗಳ ಕಾಲವೂ ಇದೆ ಸ್ಥಿತಿ ಮುಂದುವರಿಯಬಹುದು. ವೈದ್ಯರು ಸಾಮಾನ್ಯವಾಗಿ ರೋಗಿಯ ಸ್ಥಿತಿಯನ್ನು ನೋಡಿ, ಕೋಮಾ ಎಷ್ಟು ಕಾಲ ಇರಬಹುದು ಮತ್ತು ಚೇತರಿಕೆಯ ಸಾಧ್ಯತೆ ಏನು ಎಂದು ಅಂದಾಜು ಮಾಡುತ್ತಾರೆ. ಆದರೆ ಕೆಲವೊಮ್ಮೆ ನಿಖರವಾಗಿ ಹೇಳುವುದು ಕೂಡ ಕಷ್ಟವಾಗಬಹುದು.

### ಬ್ರೈನ್ ಡೆಡ್ ಎಂದರೇನು?

ಸಾಮಾನ್ಯವಾಗಿ ಬ್ರೈನ್ ಡೆತ್ ಎನ್ನುವುದು ಮೆದುಳು ಸಂಪೂರ್ಣವಾಗಿ ಕೆಲಸ ಮಾಡುವುದನ್ನು ನಿಲ್ಲಿಸಿದ ಸ್ಥಿತಿ. ಈ ಸಂದರ್ಭದಲ್ಲಿ ಮೆದುಳಿನ ಎಲ್ಲಾ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತವಾಗಿರುತ್ತವೆ. ವೈದ್ಯರ ವಿಶೇಷ ತಂಡ ಪರೀಕ್ಷೆ ನಡೆಸಿ, ವ್ಯಕ್ತಿಯನ್ನು "ಬ್ರೈನ್ ಡೆಡ್" ಎಂದು ಘೋಷಿಸುತ್ತದೆ. ವೈದ್ಯಕೀಯ ಮತ್ತು ಕಾನೂನು ದೃಷ್ಟಿಯಿಂದ ಇದನ್ನು ಮರಣವೆಂದು ಪರಿಗಣಿಸಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಅಂಗದಾನ ಮಾಡಲು ಸಹ ಕಾನೂನು ಅನುಮತಿ ದೊರೆಯುತ್ತದೆ.

### ವೈದ್ಯರು ಹೇಗೆ ನಿರ್ಧರಿಸುತ್ತಾರೆ?

ದೆಹಲಿ ಜಿಬಿ ಪಂತ್ ಆಸ್ಪತ್ರೆಯ ನ್ಯೂರೋಸರ್ಜರಿ ವಿಭಾಗದ ಮಾಜಿ ಮುಖ್ಯಸ್ಥರಾದ ಡಾ. ದಲ್ಜೀತ್ ಸಿಂಗ್ ಅವರ ಪ್ರಕಾರ, ವೈದ್ಯರು ಹಲವು ನ್ಯೂರಾಲಜಿಕಲ್ ಪರೀಕ್ಷೆಗಳ ಮೂಲಕ ರೋಗಿ ಕೋಮಾ ಸ್ಥಿತಿಯಲ್ಲಿದ್ದಾನೆಯೋ ಅಥವಾ ಬ್ರೈನ್ ಡೆಡ್ ಆಗಿದೆಯೋ ಎಂದು ನಿರ್ಧರಿಸುತ್ತಾರೆ. ಬ್ರೈನ್ ಡೆಡ್ ಆಗಿದ್ದರೆ ಕಾನೂನು ಪ್ರಕಾರ ವ್ಯಕ್ತಿಯನ್ನು ಮೃತ ಎಂದು ಪರಿಗಣಿಸಲಾಗುತ್ತದೆ. ಆದರೆ ಕೋಮಾ ಸ್ಥಿತಿಯಲ್ಲಿ ಚೇತರಿಕೆಯ ಸಾಧ್ಯತೆ ಇರುವುದರಿಂದ ವ್ಯಕ್ತಿಯನ್ನು ಮೃತ ಎಂದು ಪರಿಗಣಿಸಲಾಗುವುದಿಲ್ಲ.

ಕೋಮಾ ಪ್ರಕರಣಗಳಲ್ಲಿ ನ್ಯಾಯಾಲಯದ ಅನುಮತಿ ಏಕೆ ಅಗತ್ಯ? ಸಾಮಾನ್ಯವಾಗಿ ಕೋಮಾ ಸ್ಥಿತಿಯಲ್ಲಿ ರೋಗಿಯಲ್ಲಿ ಚೇತರಿಕೆಯ ಸಾಧ್ಯತೆ ಇರುವುದರಿಂದ ಲೈಫ್ ಸಪೋರ್ಟ್ ವ್ಯವಸ್ಥೆಯನ್ನು ತೆಗೆದುಹಾಕುವುದು ಸೂಕ್ಷ್ಮ ಹಾಗೂ ಕಾನೂನು ಸಂಬಂಧಿತ ವಿಷಯವಾಗುತ್ತದೆ. ವೈದ್ಯರು ಅಥವಾ ಕುಟುಂಬ ಸದಸ್ಯರು ಸ್ವತಃ ಈ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಈ ಕಾರಣದಿಂದ ಇಂತಹ ಸಂದರ್ಭಗಳಲ್ಲಿ ನ್ಯಾಯಾಲಯದ ಅನುಮತಿ ಪಡೆಯಬೇಕು. ನ್ಯಾಯಾಲಯವು ವೈದ್ಯಕೀಯ ಮಂಡಳಿಯ ವರದಿ, ರೋಗಿಯ ಸ್ಥಿತಿ ಮತ್ತು ಚೇತರಿಕೆಯ ಸಾಧ್ಯತೆಗಳನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳುತ್ತದೆ. ಹೀಗಾಗಿ ಕೋಮಾ ಮತ್ತು ಬ್ರೈನ್ ಡೆಡ್ ಎರಡೂ ಗಂಭೀರ ವೈದ್ಯಕೀಯ ಸ್ಥಿತಿಗಳಾಗಿದ್ದರೂ, ಮೆದುಳಿನ ಕಾರ್ಯ ಮತ್ತು ಕಾನೂನು ಮಾನ್ಯತೆಯ ದೃಷ್ಟಿಯಿಂದ ಅವುಗಳಲ್ಲಿ ಪ್ರಮುಖ ವ್ಯತ್ಯಾಸಗಳಿವೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಮಧುಗಿರಿ. ಒಳ ಮೀಸಲಾತಿ ವಿಚಾರದಲ್ಲಿ ಛಲವಾದಿ ಜನಾಂಗದ ಜ್ಞಾನಪ್ರಕಾಶಸ್ವಾಮಿಜಿ ಅವರ ನೇತೃತ್ತವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಮಾ.25 ರಂದು ಆಯೋಜಿಸಿರುವ ಪ್ರತಿಭಟನೆಯಲ್ಲಿ ಛಲವಾದಿ ಸಮುದಾಯದವರು ಭಾಗವಹಿಸಿ ಯಶಸ್ವಿಗೊಳಿಸುವಂತೆ ಮಧುಗಿರಿ ತಾಲೂಕು ಛಲವಾದಿ ಮಹಾಸಭಾ ಅಧ್ಯಕ್ಷ ಕೆ.ವಿ.ವೆಂಕಟೇಶ್ ಪ್ರಕಟಣೆಯಲ್ಲಿ ತಿಳಿಸಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಳ ಮೀಸಲಾತಿ ವಿಚಾರದಲ್ಲಿ ನಾಗಮೋಹನ್ ದಾಸ್ ಆಯೋಗ ನೀಡಿರುವ ಅವೈಜ್ಞಾನಿಕ ವರದಿ ತಿರಸ್ಕರಿಸುವಂತೆ ಸರ್ಕಾರವನ್ನು ಒತ್ತಾಯಿಸುವ ಮೂಲಕ ಮಾ. 25 ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಬೃಹತ್ ಪ್ರತಿಭನೆ ಹಮ್ಮಿಕೊಳ್ಳಲಾಗಿದೆ. ಈ ಹೋರಾಟಕ್ಕೆ ಛಲವಾದಿ ಸಮುದಾಯದವರು ಸಂಪೂರ್ಣ ಬೆಂಬಲ ನೀಡಬೇಕು. ಒಳಮೀಸಲಾತಿ ವಿಚಾರದಲ್ಲಿ ನಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು. ವರ್ಗಿಕರಣ ಕೈ ಬಿಟ್ಟು ಮೀಸಲಾತಿ ನೀಡಬೇಕು. ಆದ ಕಾರಣ ತಾಲೂಕಿನ ಎಲ್ಲ ಛಲವಾದಿ ಬಂಧುಗಳು ಬೆಂಗಳೂರಿನಲ್ಲಿ ನಡೆಯುವ ಈ ಹೋರಾಟಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ಸಮುದಾಯದ ಮುಂದಿನ ಪೀಳಿಗೆಯ ಹಿತ ಕಾಪಾಡುವ ದೃಷ್ಠಿಯಿಂದ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಛಲವಾದಿ ಬಂಧುಗಳು ಪ್ರತಿಭಟನೆಯಲ್ಲಿ ಭಾಗವಹಿಸಿ ನಮ್ಮ ಹಕ್ಕನ್ನು ನಾವುಗಳು ಪಡೆಯಲು ಮುಂದಾಗಬೇಕು. ಎಂದು ವೆಂಕಟೇಶ್ ಮನವಿ ಮಾಡಿದರು.

ಗೋಷ್ಠಿಯಲ್ಲಿ ಛಲವಾದಿ ಮುಖಂಡರಾದ ಆರ್. ಕೆ.ದೃವಕುಮಾರ್, ನರಸಿಂಹಯ್ಯಸ ಅಂಬೇಡ್ಕರ್, ಗಂಗಾಧರ್, ಹೊಸಕೆರೆ ದೇವರಾಜು, ಲಕ್ಷ್ಮೀಪತಿ,ಕೃಷ್ಣ,ರಾಜೇಶ್,ಮಿಡಿಗೇಶಿ ಬಸವರಾಜು, ಗೋವಿಂದರಾಜು, ಗೋಪಾಲಯ್ಯ, ನರಸಿಂಹಯ್ಯ ಅನೇಖರಿದ್ದರು.

# ಇಂದು 'ನಿಜಮಹಾತ್ಮ ಬಾಬಾಸಾಹೇಬ' ನಾಟಕ ಪ್ರದರ್ಶನ : ಬಚ್ಚಿಟ್ಟ ಸತ್ಯ ಬಿಚ್ಚಿಡುವ ವಿಚಾರಗಳ ಡಾ. ಅಂಬೇಡ್ಕರ್ ನಾಟಕ

ತುಮಕೂರು: ರಾಷ್ಟ್ರ ಚಿಂತನ–ಮಂಥನ ವೇದಿಕೆ ಹಾಗೂ ಕೊಡಗು ರಂಗಭೂಮಿ ಟ್ರಸ್ಟ್ ಸಹಯೋಗದಲ್ಲಿ ನಗರದ ಡಾ. ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಇದೇ 24ರಂದು ಮಂಗಳವಾರ ಸಂಜೆ 5.30ಕ್ಕೆ ಅಡ್ಡಂಡ ಕಾರ್ಯಪ್ಪ ರಚನೆ, ನಿರ್ದೇಶನದ 'ನಿಜಮಹಾತ್ಮ ಬಾಬಾಸಾಹೇಬ' ನಾಟಕ ಪ್ರದರ್ಶನವಾಗಲಿದೆ.

ಜಿಲ್ಲಾ ಬಿಜೆಪಿ ಹಿರಿಯ ಉಪಾಧ್ಯಕ್ಷ, ಮಾದರ ಮಹಾಸಭಾ ಜಿಲ್ಲಾಧ್ಯಕ್ಷ ವೈ.ಹೆಚ್.ಹುಚ್ಚಯ್ಯ, ಬಿಜೆಪಿ ನಗರಾಧ್ಯಕ್ಷ ಟಿ.ಕೆ. ಧನುಷ್ ಈ ಸಂಬಂಧ ಹೇಳಿಕೆ ನೀಡಿ, ಡಾ. ಬಾಬಾಸಾಹೇಬ ಅಂಬೇಡ್ಕರ್ ಅಸ್ಪೃಶ್ಯರಾಗಿ ಹುಟ್ಟಿದ್ದರೂ ಸ್ವಪ್ರಯತ್ನ–ಸಾಧನೆಗಳಿಂದ ಮಾನವತಾವಾದಿಯಾಗಿ ಒಂದು ಅರ್ಥದಲ್ಲಿ 'ನಿಜಮಹಾತ್ಮ'ರಾಗಿ ಬೆಳೆದದ್ದು ಅದ್ಭುತ ಯಶೋಗಾಥೆ. ಅವರು ಯಾವುದೋ ಒಂದು ವರ್ಗಕ್ಕೆ ಸೇರಿದವರಲ್ಲ. ಅವರು ದೇಶದ ಆಸ್ತಿ. ಅವರ ವ್ಯಕ್ತಿತ್ವ, ವಿದ್ವತ್ತು, ನಾಯಕತ್ವ ಗುಣ, ಸಂಘಟನಾ ಸಾಮರ್ಥ್ಯ, ಅಸ್ಪೃಶ್ಯತೆಯ ವಿರುದ್ಧ ಅವರ ಹೋರಾಟ, ಶ್ರಮ ಅದ್ವಿತಿಯ. ಅವರ ಬದುಕು ಅತ್ಯಂತ ಕರ್ಮಠ, ತ್ಯಾಗಮಯ, ತಪೋನಿಷ್ಠವಾಗಿದೆ ಎಂದು ಹೇಳಿದ್ದಾರೆ.



ಡಾ. ಅಂಬೇಡ್ಕರ್ ಅವರು ಸಾಮಾಜಿಕ ಕಳಕಳಿಯ ಅರ್ಥಶಾಸ್ತ್ರಜ್ಞ, ನಿಪುಣ ನ್ಯಾಯವಾದಿ, ಬೌದ್ಧ ಮತವನ್ನು ಅಗತ್ಯತೆಗೆ ಅನುಸಾರವಾಗಿ ಪ್ರಚುರ ಪಡಿಸಿದ ಧರ್ಮಚಕ್ರ ಪ್ರವರ್ತನಕಾರ. ಶಿಕ್ಷಣ–ಸಂಘಟನೆ–ಹೋರಾಟ ಎಂಬ ಮೂರು ಸುದರ್ಶನ ಚಕ್ರ ನೀಡಿದ ಮಾನವತಾವಾದಿ. ನಿಷ್ಟುರತೆ, ಬಾಬಾಸಾಹೇಬರಿಗೆ ಇದ್ದ ಖಚಿತತೆ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ಅವರಿಗಿದ್ದ ನಿಲುವು, ಭಾರತ–ಪಾಕಿಸ್ತಾನ ವಿಭಜನೆ ಸಂದರ್ಭ ಮುಸಲ್ಮಾನರ ಬಗೆಗಿನ ಅವರ ಅಭಿಪ್ರಾಯ ಇವೆಲ್ಲವನ್ನು ಆಗಿನ ಆಡಳಿತರೂಢರು, ವಿಶೇಷವಾಗಿ ಕಾಂಗ್ರೆಸ್ ಪಕ್ಷ ಮುಚ್ಚಿಟ್ಟಿದೆ. ಇತ್ತಿಚೆಗಂತೂ ಡಾ. ಅಂಬೇಡ್ಕರ್‌ರನ್ನು ಒಂದು ವರ್ಗಕ್ಕೆ ಮೀಸಲಿಡಲಾಗಿದೆ. ಅವರನ್ನು ಅವರು ಸಾಯುವವರೆಗೆ, ಸತ್ತ ಮೇಲೂ ಅವಮಾನಿಸಿದ, ಅವರ ಸಾಧನೆಗಳನ್ನು ಮರೆಯಲ್ಲಿಟ್ಟಿದ್ದ ಕಾಂಗ್ರೆಸ್ ಪಕ್ಷ ವೋಟ್ ಬ್ಯಾಂಕ್‌ಗಾಗಿ ಅವರ ಹೆಸರು–ಭಾವಚಿತ್ರವನ್ನು ಬಳಸಿಕೊಳ್ಳುತ್ತಿದೆ ಎಂದು ತಿಳಿಸಿದ್ದಾರೆ.

ಡಾ. ಅಂಬೇಡ್ಕರ್ ವಿಷಯದಲ್ಲಿ ಬಚ್ಚಿಟ್ಟ ಅನೇಕ ಸತ್ಯಗಳನ್ನು ಬಿಚ್ಚಿಡುವ ಪ್ರಯತ್ನದ ರಂಗಪ್ರದರ್ಶನವೇ ಈ ನಾಟಕ 'ನಿಜಮಹಾತ್ಮ ಬಾಬಾಸಾಹೇಬ'. ಹೆರಾಂತ ರಂಗನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅವರು ಈ ನಾಟಕವನ್ನು ರಚಿಸಿ, ನಿರ್ದೇಶಿಸಿದ್ದಾರೆ. ನಾಟಕ ವೀಕ್ಷಣೆಗೆ ಉಚಿತ ಪ್ರವೇಶವಿದೆ. ಡಾ. ಅಂಬೇಡ್ಕರ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಾಟಕ ವೀಕ್ಷಣೆ ಮಾಡಬೇಕು ಎಂದು ವೈ.



ಹೆಚ್. ಹುಚ್ಚಯ್ಯ ಹಾಗೂ ಧನುಷ್ ಮನವಿ ಮಾಡಿದ್ದಾರೆ.

ಕಲಾವಿದರಾದ ಡಾ. ಚಂದ್ರಶೇಖರ್, ಸತೀಶ್, ಪಂಚವಟಿ ಶಶಿಕಲಾ ರಾಮಚಂದ್ರದೇವ, ಕೆ.ವಿ. ರಮಣ ಆರಾಧ್ಯ, ಉಡುಪಿ ವಾದಿರಾಜ್ ಸಾಮರಸ್ಯ, ಜಗದೀಶ್ ಮನವಾರ್ತೆ, ಕಾರ್ತಿಕ್ ಉಪಮನ್ಯು, ಮಂಜು ಶಿಲ್ಪಿ ಮೊದಲಾದವರು ನಾಟಕದ ಪಾತ್ರವರ್ಗದಲ್ಲಿದ್ದಾರೆ ಎಂದು ಹೇಳಿದ್ದಾರೆ.

# ದೇಶಕ್ಕಾಗಿ ಪ್ರಾಣತೆತ್ತ ಭಗತ್‌ಸಿಂಗ್, ರಾಜಗುರು, ಸುಖದೇವ್ ಅವರ ತ್ಯಾಗ ಬಲಿದಾನದ ಸ್ಮರಣೆಗೆ ಅನನ್ಯ ಕಾಲೇಜಿನಲ್ಲಿ 'ಶಾಹಿದ್ ದಿವಸ್' ಆಚರಣೆ

ತುಮಕೂರು: ದೇಶಕ್ಕಾಗಿ ಪ್ರಾಣತೆತ್ತ ಭಗತ್‌ಸಿಂಗ್, ರಾಜಗುರು, ಸುಖದೇವ್ ಅವರ ತ್ಯಾಗ ಬಲಿದಾನದ ಸ್ಮರಣೆಗೆ ಹುತಾತ್ಮ ದಿನವನ್ನು ಆಚರಿಸಲಾಗುತ್ತಿದೆ ಎಂದು ತುಮಕೂರು ವಿಶ್ವವಿದ್ಯಾನಿಲಯ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ.ಎಲ್.ಪಿ.ರಾಜು ತಿಳಿಸಿದರು.

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗವಿರುವ ಅನನ್ಯ ಸಮೂಹ ಸಂಸ್ಥೆಯಲ್ಲಿ ಕೇಂದ್ರ ಯುವ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಮೈ ಭಾರತ್–ಮೇರಾ ಯುವ ಭಾರತ್ ತುಮಕೂರು ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ ಶಾಹಿದ್ ದಿವಸ್ (ಹುತಾತ್ಮರ ದಿನ) ಮತ್ತು ಪಾದಯಾತ್ರೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿ, ಭಗತ್‌ಸಿಂಗ್, ರಾಜಗುರು, ಸುಖದೇವ್ ಅವರನ್ನು ಬ್ರಿಟಿಷ್ ಸರ್ಕಾರವು 1931 ರ ಮಾರ್ಚ್ 23 ರಂದು ಗಲ್ಲಿಗೇರಿಸಿತ್ತು. ಅವರ ನೆನಪಿಗಾಗಿ ಹಾಗೂ ಅವರ ತ್ಯಾಗ, ಬಲಿದಾನದ ಸ್ಮರಣೆಗಾಗಿ ಹುತಾತ್ಮ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ಹುತಾತ್ಮ ದಿನವನ್ನು ಇಂದು ದೇಶದಾದ್ಯಂತ ಆಚರಿಸಲಾಗುತ್ತದೆ. ನಮ್ಮ ದೇಶದ ಯುವಕರಲ್ಲಿ ದೇಶಭಕ್ತಿಯನ್ನು ಹೆಚ್ಚಿಸಿ, ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಅವರ ಆದರ್ಶಗಳನ್ನು ಪಾಲಿಸುವಂತೆ ಅವರಲ್ಲಿ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಹೇಳಿದರು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಅನನ್ಯ ಸಮೂಹ ಸಂಸ್ಥೆಯ ಟ್ರಸ್ಟಿ ಡಾ.ಹೆಚ್.ಹರೀಶ್ ಮಾತನಾಡಿ, ಯುವಕರು ದೇಶದ ಕುರಿತು ಯೋಚಿಸಬೇಕು. ದೇಶಾಭಿಮಾನವನ್ನು ಬೆಳೆಸಿಕೊಳ್ಳಬೇಕು. ದೇಶಕ್ಕಾಗಿ 23 ನೇ ವಯಸ್ಸಿನಲ್ಲಿಯೇ ಪ್ರಾಣತೆತ್ತ ಭಗತ್‌ಸಿಂಗ್ ಆದರ್ಶವಾಗಬೇಕು. ಅಂದಿನ ಯುವಕರು ಬ್ರಿಟಿಷರ ವಿರುದ್ಧ ಹೋರಾಡಿದರು. ಇಂದಿನ ಯುವಕರು ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕು ಎಂದು ಕರೆ ನೀಡಿದರು.

ದೇಶಕ್ಕಾಗಿ ತಮ್ಮ ಪ್ರಾಣವನ್ನು ಲೆಕ್ಕಿಸದೆ ಹೋರಾಡಿದ ಅಂತಹ ನಾಯಕರನ್ನು ದೇಶದ ಜನತೆ ಮರೆತಿದ್ದಾರೆ. ಆದ್ದರಿಂದ, ಅವರ ಕುರಿತು ಇಂದಿನ ಪೀಳಿಗೆಗೆ ತಿಳಿಸಬೇಕಾಗಿದೆ ಎಂದು ಹೇಳಿದರು.

ಕೊರಟಗೆರೆ ತಾಲ್ಲೂಕು ಗರುಗದೊಡ್ಡಿ ಗ್ರಾಮೀಣ ಮಾಹಿತಿ ತಂತ್ರಜ್ಞಾನ ಕೇಂದ್ರದ ಅಧ್ಯಕ್ಷ ಜಿ.ವಿ.ವೀರೇಂದ್ರ ಪ್ರಸಾದ್ ಮಾತನಾಡಿ, ಭಗತ್ ಸಿಂಗ್, ಸುಖದೇವ್, ರಾಜ್‌ಗುರು ಈ ಮೂವರು ಕ್ರಾಂತಿಕಾರಿಗಳು ಅಸಂಖ್ಯಾತ ಭಾರತೀಯರ ಮನದಲ್ಲಿ ಇಂದಿಗೂ ಜೀವಂತವಾಗಿದ್ದಾರೆ. ದೇಶಕ್ಕಾಗಿ ಅವರು ಮಾಡಿದ ತ್ಯಾಗ ಬಲಿದಾನ ಸದಾ ಅಚ್ಚಳಿಯದೆ ಇರುತ್ತದೆ. ಈ ಮೂವರು ಮಹನೀಯರಲ್ಲಿ ಇದ್ದ ದೇಶ ಪ್ರೇಮ, ದೇಶಾಭಿಮಾನ ಎಲ್ಲರಲ್ಲೂ ಮೂಡಬೇಕು, ನಾವೆಲ್ಲ ಭಾರತೀಯರೆಂಬ ಹೆಮ್ಮೆಯಿಂದ ದೇಶ ಸೇವೆಗೆ ಸದಾ ಸಿದ್ದರಾಗಿರಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಹೇಮಂತ್ ಕುಮಾರ್ ಮಾತನಾಡಿ, ಭಗತ್ ಸಿಂಗ್ ಸುಖದೇವ್, ರಾಜ್‌ಗುರು ಅವರ ತ್ಯಾಗ ಮತ್ತು ಶೌರ್ಯದ ಕಥೆ ಭಾರತೀಯ ಸ್ವಾತಂತ್ರ್ಯ ಚಳವಳಿಯ ಅತ್ಯಂತ ಸ್ಪೂರ್ತಿದಾಯಕವಾದದ್ದು. ಯುವ ಜನತೆ ಮೋಜು ಮಸ್ತಿಯಲ್ಲಿ ಜೀವನ ವ್ಯರ್ಥ ಮಾಡದೇ ಸದಾ ಇಂತಹ ಮಹನೀಯರ ಕಥೆಗಳಿಂದ ಪ್ರೇರೇಪಿತರಾಗಿ ದೇಶದ ಅಭಿವೃದ್ಧಿಗೆ ಸದಾ ತಮ್ಮಿಂದಾದ ಕೊಡುಗೆ ನೀಡಬೇಕೆಂದರು.

ಕಾರ್ಯಕ್ರಮಕ್ಕೂ ಮುನ್ನ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಪ್ರಮುಖ ರಸ್ತೆಯಲ್ಲಿ ಪಾದಯಾತ್ರೆ ನಡೆಸಿ ಹುತಾತ್ಮರಿಗೆ ಗೌರವ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕಾಮರ್ಸ್ ವಿಭಾಗದ ಮುಖ್ಯಸ್ಥ ಅಭಯ್ ಕುಮಾರ್, ಇಂಗ್ಲೀಷ್ ವಿಭಾಗದ ಕೆ.ಎನ್.ಕದುರಪ್ಪ, ಕನ್ನಡ ವಿಭಾಗದ ಬಿ.ಚಂದ್ರಶೇಖರ್, ರುಚಿತ, ಜಿ.ವಿ.ಯತೀಶ್, ವಡ್ಡಗೆರೆ ಆನಂದ ಗುಂಡಾರಿ, ವಿನಯ್ ಕುಮಾರ್, ಜಿ.ವಿ.ನಾಗೇಂದ್ರ ಕುಮಾರ್, ಅನನ್ಯ ಸಮೂಹ ಸಂಸ್ಥೆಯ ಬೋಧಕ, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಶಾಂತಿ, ಸೌಹಾರ್ದತೆ ಹಾಗೂ ಸಂಭ್ರಮದಿಂದ ರಂಜಾನ್ ಆಚರಣೆ

ರಾಮನಗರ : ಪವಿತ್ರ ಹಬ್ಬವಾದ ರಂಜಾನ್ ಹಬ್ಬವನ್ನು ಎಲ್ಲರೂ ಒಗ್ಗಟ್ಟಿನಿಂದ ಆಚರಣೆ ಮಾಡುತ್ತಿದ್ದೇವೆ. ಈ ಬಾರಿಯೂ ಯುಗಾದಿ ಹಬ್ಬದ ಮರುದಿನ ರಂಜಾನ್ ಆಚರಿಸಲಾಗುತ್ತಿದ್ದು ಈ ಎರಡು ಹಬ್ಬವನ್ನು ಶಾಂತಿ, ಸೌಹಾರ್ದತೆ ಹಾಗೂ ಸಂಭ್ರಮದಿಂದ ಆಚರಣೆ ಮಾಡಲಾಗಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ (ಶಶಿ) ತಿಳಿಸಿದರು.

ಪವಿತ್ರ ರಂಜಾನ್ ಹಬ್ಬವನ್ನು ಮುಸ್ಲಿಂ ಬಾಂಧವರು ರಾಮನಗರಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಿದರು. ಸಾವಿರಾರು ಮಂದಿ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

ಶನಿವಾರ ಬೆಳಿಗ್ಗೆಯಿಂದಲೇ ಹಿರಿಯರು, ಮಕ್ಕಳು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಭಾಂದವರು ಹೊಸ ಬಟ್ಟೆಯನ್ನು ಧರಿಸಿ ರಾಮನಗರದ ತಾಲೂಕು ಕಚೇರಿ ಎದುರಿನ ಈದ್ಗಾ ಮೈದಾನದೆಡೆ ಧಾವಿಸುತ್ತಿದ್ದರು.

ಬೆಳಗ್ಗೆ 10 ರಿಂದ 11 ಗಂಟೆವರೆಗೆ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು, ಧರ್ಮಗುರುಗಳ ಹಿತವಚನಗಳನ್ನು ಆಲಿಸಿದರು. ನಂತರ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಸಾಮೂಹಿಕ ಪ್ರಾರ್ಥನೆಯಲ್ಲಿ ಶಾಸಕ ಇಕ್ಬಾಲ್ ಹುಸೇನ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

ಸಾಮೂಹಿಕ ಪ್ರಾಥನೆ ನಂತರ ಮನೆಗಳಿಗೆ ಹಿಂತಿರುಗತ್ತಿದ್ದ ಮುಸ್ಲಿಂ ಬಾಂಧವರಿಗೆ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಶಶಿ ಅವರು ಮಜ್ಜಿಗೆ ವಿತರಿಸಿ, ರಂಜಾನ್ ಹಬ್ಬದ ಶುಭ ಕೋರಿದರು. ಈ ವೇಳೆ ಮಾತನಾಡಿದ ಅವರು, ರಂಜಾನ್ ಅಥವಾ ಈದ್ ಅಲ್ ಫಿತರ್ ಮುಸ್ಲಿಂ ಸಮುದಾಯದವರು ಆಚರಿಸುವಂತಹ ಹಬ್ಬಗಳಲ್ಲಿ ಅತ್ಯಂತ ಮುಖ್ಯವಾದ ಹಬ್ಬವಾಗಿದೆ.



ಮೌಲ್ಯಾಧಾರಿತ ಬದುಕಿನ ರಂಜಾನ್ ಒಂದು ರಾಜಮಾರ್ಗ. ದೈಹಿಕ ಮತ್ತು ಮಾನಸಿಕ ಶುದ್ಧಿ ರಂಜಾನ್ ಆಚರಣೆಯಿಂದ ಆಗಲಿದೆ ಎಂದರು.

ಮನುಷ್ಯ ತನ್ನ ಕೆಡಕುಗಳನ್ನು ಕೆಳೆದುಕೊಳ್ಳುತ್ತ ಒಳ್ಳೆಯದನ್ನು ಪಡೆದುಕೊಳ್ಳುತ್ತ ಸಾಗುವ ಬಗೆಯನ್ನು ರಂಜಾನ್ ತಿಳಿಸುತ್ತದೆ. ಈ ಬಾರಿಯೂ ಸಹ ಯುಗಾದಿ ಹೊಸತೊಡಕು ಮಾರನೆಯ ದಿನವೇ ರಂಜಾನ್ ಆಚರಣೆ ಮಾಡಲಾಗುತ್ತಿದೆ. ಭಾವೈಕ್ಯತೆಯಿಂದ ಎರಡು ಧರ್ಮದ ದೊಡ್ಡ ಹಬ್ಬವನ್ನು ಆಚರಣೆ ಮಾಡಲಾಗಿದ್ದು, ಉತ್ತಮ ಮಳೆಯಾಗಿ, ಒಳ್ಳೆಯ ಬೆಳೆ ಬೆಳೆಯಲಿ. ಎಲ್ಲೆಡೆ ಶಾಂತಿ, ಸೌಹಾರ್ದತೆ ನೆಲೆಸಲಿ ಯುಗಾದಿ ಹಾಗೂ ರಂಜಾನ್ ಹಬ್ಬ ಎಲ್ಲಾ ಜಾತಿ ಧರ್ಮದವರಿಗೆ ಶುಭ ತರಲಿ ಎಂದು ಇದೇ ವೇಳೆ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಆಶಿಸಿದರು.

ಹೊಸ ವಸ್ತ್ರ ತೊಟ್ಟು ಸಡಗರ : ರಂಜಾನ್ ತಿಂಗಳ ಉಪವಾಸ ಚಂದ್ರನ ದರ್ಶನದೊಂದಿಗೆ ಪ್ರಾರಂಭವಾಗಿತ್ತು. 30 ದಿನಗಳ ಉಪವಾಸದ ನಂತರ ಭಾನುವಾರ ರಾತ್ರಿ ಚಂದ್ರನ ದರ್ಶನವಾದ ಬಳಿಕ ಉಪವಾಸ ಅಂತ್ಯಗೊಳಿಸಿ ಸಡಗರ ಸಂಭ್ರಮದಿಂದ ಹೊಸ ಬಟ್ಟೆ ಧರಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಆಚರಿಸಿದರು.

ಪ್ರಾರ್ಥನೆ ನಂತರ ಸಂಪ್ರದಾಯದಂತೆ ಮುಸ್ಲಿಂ ಬಾಂಧವರು ತಮ್ಮ ಆದಾಯದಲ್ಲಿ ಒಂದಿಷ್ಟು ಪ್ರಮಾಣದ ದವಸ ದಾನ್ಯ, ಹಣ್ಣು ಹಂಪಲು, ನಾಣ್ಯಗಳನ್ನು ದಾನ ಮಾಡುವ ಮೂಲಕ ಅಲ್ಲಾನ ಕೃಪೆಗೆ ಪಾತ್ರರಾದರು.

ವಿವಿಧ ಪಕ್ಷಗಳ. ಸಂಘ ಸಂಸ್ಥೆಗಳ ಹಬ್ಬಕ್ಕೆ ಶುಭಕೋರುವ ಬ್ಯಾನರ್‌ಗಳು ರಾರಾಜಿಸುತ್ತಿದ್ದವು. ಹಿಂದುಗಳು ಸಹ ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಶಯಗಳನ್ನು ತಿಳಿಸಿದರು.

ಈದ್ಗಾ ಮೈದಾನದ ಮುಂದೆ ಮಾರಾಟ ಮಾಡುತ್ತಿದ್ದ ಸುಗಂಧ ದ್ರವ್ಯ, ಕೆಂಪು ಗುಲಾಬಿ ಹೂವಿಗೆ ಬೇಡಿಕೆ ಹೆಚ್ಚಾಗಿತ್ತು. ಮುಸ್ಲಿಂ ಬಾಂಧವರು ವ್ಯಾಪಾರದಲ್ಲಿ ನಿರತರಾಗಿದ್ದರು. ಶನಿವಾರ ಹಬ್ಬದ ಆಚರಣೆಯ ನಂತರ ಒಂದು ತಿಂಗಳ ಉಪವಾಸ ವ್ರತವನ್ನು ಅಂತ್ಯಗೊಳಿಸಲಾಯಿತು.

**ಸಂಚಾರದಲ್ಲಿ ಬದಲಾವಣೆ:** ನಗರದ ಬೆಂಗಳೂರು ಮೈಸೂರು ಹೆದ್ದಾರಿಯ ಪಕ್ಕದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಈದ್ಗಾ ಮೈದಾನದಲ್ಲಿ ಮುಸ್ಲಿಂ ಭಾಂದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಪ್ರಯುಕ್ತ ಪೊಲೀಸರು ಬೆಂಗಳೂರು ಮೈಸೂರು ರಸ್ತೆಯಲ್ಲಿ ಸಂಚಾರ ಬದಲಾವಣೆ ಮಾಡಿದ್ದರು. ಬೆಳಿಗ್ಗೆ 10 ರಿಂದ ಮದ್ಯಾಹ್ನ 12 ಗಂಟೆಯವರೆಗೆ ಮೈಸೂರು ಕಡೆ ತೆರಳುವ ವಾಹನಗಳನ್ನು ಐಜೂರು ರಸ್ತೆ, ರಾಯರದೊಡ್ಡಿ, ಕೆಂಪೇಗೌಡನದೊಡ್ಡಿ ಮುಖಾಂತರ ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಯ ಮೂಲಕ ಕೆಂಗಲ್ ಮೂಲಕ ಸಂಚರಿಸಿದರೆ, ಬೆಂಗಳೂರು ಕಡೆಯ ತೆರಳುವ ವಾಹನಗಳನ್ನು ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಯಿಂದ ಜಯಪುರ ಗೇಟ್, ಜಾಲಮಂಗಲ ರಸ್ತೆ, ಕೆಂಪೇಗೌಡ ಸರ್ಕಲ್, ಐಜೂರು ವೃತ್ತದಿಂದ ಬೆಂಗಳೂರು ಕಡೆ ಸಂಚರಿಸುವಂತೆ ಸೂಚನೆ ನೀಡಿದ್ದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

# ಕೌಶಲ್ಯಜೀವಿಗಳಿಗೆ ಸುವರ್ಣಾವಕಾಶ ನಿರುದ್ಯೋಗ ನಿವಾರಣೆಗೆ ಜಾಗೃತಿ ಕಾರ್ಯಗಾರ

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (KVIC) ಭಾರತ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ ಅಡಿಯಲ್ಲಿ ಬರುವ ಶಾಸನಬದ್ಧ ಸಂಸ್ಥೆಯಾಗಿದೆ. ಏಪ್ರಿಲ್ 1957 ರಲ್ಲಿ ಸ್ಥಾಪಿತವಾದ ಇದು, ಗ್ರಾಮೀಣ ಪ್ರದೇಶಗಳಲ್ಲಿ ಖಾದಿ ಮತ್ತು ಇತರ ಗ್ರಾಮ ಕೈಗಾರಿಕೆಗಳನ್ನು ಯೋಜಿಸಲು, ಉತ್ತೇಜಿಸಲು ಮತ್ತು ಅಭಿವೃದ್ಧಿಪಡಿಸಲು ಕಾರ್ಯನಿರ್ವಹಿಸುತ್ತದೆ. ಇದು ಉದ್ಯೋಗಾವಕಾಶ ಸೃಷ್ಟಿ, ಆರ್ಥಿಕ ನೆರವು ಮತ್ತು ತರಬೇತಿಯನ್ನು ನೀಡುತ್ತದೆ.

ಮುಖ್ಯಾಂಶಗಳು: ಸ್ಥಾಪನೆ: 1957 (ಸಂಸತ್ತಿನ ಕಾಯಿದೆಯಡಿ).

ಮುಖ್ಯ ಕಚೇರಿ: ಮುಂಬೈ.

ಉದ್ದೇಶ: ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ, ಸ್ವಾವಲಂಬನೆ ಮತ್ತು ಉದ್ಯೋಗ ಸೃಷ್ಟಿ.

ಕಾರ್ಯಗಳು: ಖಾದಿ ಉತ್ಪಾದನೆಗೆ ಉತ್ತೇಜನ, ಕಚ್ಚಾ ವಸ್ತುಗಳ ಪೂರೈಕೆ, ತರಬೇತಿ ಮತ್ತು ಮಾರುಕಟ್ಟೆ ಸೌಲಭ್ಯ.

ಪ್ರಮುಖ ಯೋಜನೆ: ಪ್ರಧಾನ ಮಂತ್ರಿ ಉದ್ಯೋಗ ಸೃಜನಾ ಕಾರ್ಯಕ್ರಮ (ಕಒಇಉಕ).

ಕರ್ನಾಟಕದಲ್ಲಿ: ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು 1957 ರಿಂದ ರಾಜ್ಯದಲ್ಲಿ ಈ ಚಟುವಟಿಕೆಗಳನ್ನು ನೋಡಿಕೊಳ್ಳುತ್ತದೆ.

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಪ್ರಯೋಜನಗಳು:

ಗ್ರಾಮೀಣ ಕೌಶಲ್ಯಜೀವಿಗಳಿಗೆ ಆರ್ಥಿಕ ಸಹಾಯ, ತರಬೇತಿ, ಮತ್ತು ಸ್ವಯಂ ಉದ್ಯೋಗ ಅವಕಾಶಗಳನ್ನು ಒದಗಿಸುವ ಮೂಲಕ ಸ್ವದೇಶಿ ಮತ್ತು ಪರಿಸರ ಸ್ನೇಹಿ ಉತ್ಪನ್ನಗಳನ್ನು ಪ್ರೋತ್ಸಾಹಿಸುತ್ತದೆ.

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ




# ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಎಸ್.ಕೃಷ್ಣಪ್ಪರವರು ಒಳ್ಳೆಯ ಅಧಿಕಾರಿ

ಮಧುಗಿರಿ: ತುಮಕೂರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾಗಿರುವ ಎಸ್.ಕೃಷ್ಣಪ್ಪರವರು ಒಳ್ಳೆಯ ಅಧಿಕಾರಿಯಾಗಿದ್ದು , ಇಲಾಖೆಯ ಯಾವುದೇ ಸ್ಥರದ ಅಧಿಕಾರಿಗಳು ಹಾಗು ಹೊರಗುತ್ತಿಗೆ ಡಿ ಗ್ರೂಪ್ ನೌಕರರಿಗೂ ತೊಂದರೆ ಕೊಟ್ಟಿಲ್ಲ. ಇವರ ಮೇಲೆ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ಮಧುಗಿರಿಯ ವಸತಿ ಶಾಲಾ ಹೊರಗುತ್ತಿಗೆ ಸಂಘ ವತಿಯಿಂದ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಇತ್ತೀಚೆಗೆ ಪಾವಗಡ ತಾಲೂಕಿನ ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್ ರವರು ಕಛೇರಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆ ಗೂ ಮುನ್ನ ವಿಡಿಯೋ ಮಾಡಿ ಜಂಟಿ ನಿರ್ದೇಶಕ ಕೃಷ್ಣಪ್ಪ ರವರ ಕಿರುಕುಳ ಎಂದು ಹೇಳಿದ್ದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಆದರೆ ಕೃಷ್ಣಪ್ಪರವರು ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಜಿಲ್ಲೆಯ ಎಲ್ಲಾ ಸ್ಥರದ ಅಧಿಕಾರಿಗಳು , ಸಿಬ್ಬಂದಿಗಳೊಂದಿಗೆ ಉತ್ತಮ ಬಾಂಧವ್ಯ



ಹೊಂದಿದ್ದರು. ಎಲ್ಲರ ಕಷ್ಟಗಳಿಗೂ ಸ್ಪಂದಿಸುತ್ತಿದ್ದರು. ಯಾರಿಗೂ ಕೆಲಸದ ವಿಚಾರದಲ್ಲಿ ಕಿರುಕುಳ ಒತ್ತಡ ಹೇರುತ್ತಿರುಲಿಲ್ಲ. ಮಲ್ಲಿಕಾರ್ಜುನ ರವರು ಯಾವುದೋ ವೈಯಕ್ತಿಕ ಕಾರಣಗಳಿಂದ ಖಿನ್ನತೆಗೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿರಬಹುದು . ಅವರು ವೈಯಕ್ತಿಕ ಖಿನ್ನತೆಯಿಂದ ಕೃಷ್ಣಪ್ಪರವರ ಹೆಸರು ಹೇಳಿರುವ ಸಾಧ್ಯತೆ ಇರುತ್ತದೆ ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇವೆ. ಒಳ್ಳೆಯ ಅಧಿಕಾರಿಯಾಗಿರುವ ಕೃಷ್ಣಪ್ಪ ರವರ ಮೇಲೆ ಯಾವುದೇ ಕ್ರಮ ಜರುಗಿಸಬಾರದೆಂದು ಸಂಘದ ಪದಾಧಿಕಾರಿಗಳು ಉಪವಿಭಾಗಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಸಂಘದ ಜಿಲ್ಲಾಧ್ಯಕ್ಷ ರವಿಕುಮಾರ್, ತಾಲೂಕು ಅಧ್ಯಕ್ಷ ಶಂಕರಪ್ಪ. ಜಿ., ಹೊರಗುತ್ತಿಗೆ ಆಧಾರದ ಡಿ ಗ್ರೂಪ್ ನೌಕರರಾದ ಮನೋಜ್, ಸಿದ್ದಗಂಗಪ್ಪ, ಲತಾ, ರತ್ನಮ್ಮ, ಷಂಶದುನ್ನೀಸಾ, ಸೇರಿದಂತೆ ಇತರರು ಹಾಜರಿದ್ದರು

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

# ಸಿದ್ದಗಂಗಾ ಡಯಾಲಿಸಿಸ್ ಸೆಂಟರ್ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮಧುಗಿರಿ ಶಾಖೆ ಆರಂಭ

ಮಧುಗಿರಿ: ಶ್ರೀ ಸಿದ್ದಗಂಗಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ತುಮಕೂರು ಇವರ ನಿರ್ವಹಣೆಯಲ್ಲಿ ಸ್ಥಾಪಿಸಿರುವ ಶ್ರೀ ಸಿದ್ದಗಂಗಾ ಡಯಾಲಿಸಿಸ್ ಸೆಂಟರ್ ಮತ್ತು ಪಾವಗಡದ ಶ್ರೀ ಶಾರದಾದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಮಧುಗಿರಿ ಶಾಖೆ ಆರಂಭವಾಗಿ ಒಂದು ವರ್ಷ ಪೂರೈಸಿದ್ದು ಈ ಹಿನ್ನೆಲೆಯಲ್ಲಿ ಅನೇಕ ನೂತನ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಚಿಂತನೆ ನಡೆಸಲಾಗಿದೆ ಎಂದು ಪಾವಗಡದ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಜಪಾನಂದ ಮಹಾರಾಜ್ ತಿಳಿಸಿದರು.

ಮಧುಗಿರಿಯಲ್ಲಿ ನಮ್ಮ ಶಾಖೆ ಪ್ರಾರಂಭವಾಗಿ ಒಂದು ವರ್ಷದ ಹಿನ್ನೆಲೆಯಲ್ಲಿ ಹೃದ್ರೋಗ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗುವುದು ಇದುವರೆಗೂ ಸರಿಸುಮಾರು 1250 ಡಯಾಲಿಸಿಸ್ ಪ್ರಕ್ರಿಯೆಯನ್ನು ನಡೆಸಲಾಗಿದೆ ಇದರೊಂದಿಗೆ ಶಾರದಾದೇವಿ ಕಣ್ಣಿನ ಆಸ್ಪತ್ರೆ ವತಿಯಿಂದ 1500ಕ್ಕೂ ಮಿಗಿಲಾಗಿ ಜನರಿಗೆ ನೇತ್ರ ಪರೀಕ್ಷೆ ಮತ್ತು ಚಿಕಿತ್ಸೆಯನ್ನು ನೀಡಲಾಗಿದೆ ಸುಮಾರು



120ಕ್ಕೂ ಹೆಚ್ಚು ಮಂದಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ ಮಧುಗಿರಿಯಂತಹ ಪ್ರದೇಶದಲ್ಲಿ ಈ ರೀತಿ ಸೇವಾ ಯಜ್ಞ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯವಾದದ್ದು ಎಂದ ಅವರು ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮ ಮಾರ್ಚ್ 23 ಸೋಮವಾರ ಬೆಳಗ್ಗೆ 11 ಗಂಟೆಗೆ ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಮುಂಬಾಗದಲ್ಲಿರುವ ಸಿದ್ದಗಂಗಾ ಡಯಾಲಿಸಿಸ್ ಸೆಂಟರ್ ಆವರಣದಲ್ಲಿ ಕಾರ್ಯಕ್ರಮ ನಡೆಸಲಾಗುವುದು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಸಿದ್ದಗಂಗಾ ಮಠ ವಹಿಸುವರು ಅಧ್ಯಕ್ಷತೆಯನ್ನು ಸ್ವಾಮಿ ಜಪಾನಂದ ಮಹಾರಾಜ್ ವಹಿಸುವರು ಉದ್ಘಾಟನೆಯನ್ನು ಮಾಜಿ ಸಚಿವರು, ಶಾಸಕರಾದ ಕೆಎನ್ ರಾಜಣ್ಣ ನೆರವೇರಿಸಲಿದ್ದಾರೆ ಮುಖ್ಯ ಅತಿಥಿಗಳಾಗಿ ಉಪವಿಭಾಗಾಧಿಕಾರಿ ಗೋಟೂರು ಶಿವಪ್ಪ ಡಿ ವೈ ಎಸ್ ಪಿ ಮಂಜುನಾಥ್ ಸಿದ್ದಗಂಗಾ ಸಂಸ್ಥೆಯ ಕಾರ್ಯದರ್ಶಿ ಟಿ ಎಮ್ ಸ್ವಾಮಿ ನಿರ್ದೇಶಕ ಡಾಕ್ಟರ್ ಪರಮೇಶ್ ಪ್ರಾಂಶುಪಾಲರಾದ ಡಾಕ್ಟರ್ ಶಾಲಿನಿ ಡಾ ಜಿ ಕೆ ಜಯರಾಮ್ ಶ್ರೀ ಸಿದ್ದಗಂಗಾ ಸಂಶೋಧನಾ ಸಂಸ್ಥೆ ಮತ್ತು ಶಾರದಾದೇವಿ ಕಣ್ಣಿನ ಆಸ್ಪತ್ರೆಯ ವೈದ್ಯಾಧಿಕಾರಿಗಳು ಆಡಳಿತ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ ಎಚ್ ಸಿ ಬಸವರಾಜು ವಕೀಲರು ಮತ್ತು ಎಚ್ ಸಿ ವೀರಭದ್ರಪ್ಪ ಇವರ ಸ್ಮರಣಾರ್ಥ ಇವರ ಮಕ್ಕಳಾದ ರುದ್ರೇಶ್ ವೀರೇಶ್ ಶಿವಕುಮಾರ್ ಮತ್ತು ಕುಟುಂಬಸ್ಥರಾದ ಎಂ ಶಿವಕುಮಾರ್, ಅನುರಾಧ ಉಮಾ ಶಂಕರ್ ಶ್ರೀ ಅಕ್ಷಯ್ ರವರ ನೆರವಿನೊಂದಿಗೆ ಶ್ರೀ ಸಿದ್ದಗಂಗಾ ಆಸ್ಪತ್ರೆಯ ನಿರ್ವಹಣೆಯಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪಿಸಲಾಗಿದೆ ಎಂದು ತಿಳಿಸಿದ್ದಾರೆ

# ರೂರಲ್ ಪದವಿ ಕಾಲೇಜಿನ ಪ್ರಾಂಶುಪಾಲರಿಗೆ ಶಿಷ್ಯ ಬಳಗದಿಂದ ಬೀಳ್ಕೊಡುಗೆ ಸಮಾರಂಭ

ಕನಕಪುರದ ರೂರಲ್ ಪದವಿ ಕಾಲೇಜಿನ ಪ್ರಾಂಶುಪಾಲ ಹುದ್ದೆಯಿಂದ ವಯೋ ನಿವೃತ್ತಿ ಹೊಂದುತ್ತಿರುವ "ಎಂ.ಟಿ. ಬಾಲಕೃಷ್ಣ" ಅವರಿಗೆ ಕಾಲೇಜಿನ ದೂಂತೂರು ಮಾರೇಗೌಡ ಸಭಾಂಗಣದಲ್ಲಿ ಆಡಳಿತ ಮಂಡಳಿ, ಕಾಲೇಜು ಭೋದಕ ಮತ್ತು ಭೋದಕೇತರ ವರ್ಗ ಹಾಗೂ ಶಿಷ್ಯ ಬಳಗದಿಂದ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಎಂ ಟಿ ಬಾಲಕೃಷ್ಣ ಅವರ ಬಗ್ಗೆ ಹೇಳುವುದಾದರೆ.. ಇವರು ಚನ್ನಪಟ್ಟಣ ತಾಲೂಕಿನ ಸಂತೆ ಮೊಗೇನಹಳ್ಳಿ ಗ್ರಾಮದವರಾಗಿದ್ದು, ಪ್ರೌಢಶಿಕ್ಷಣ ಮತ್ತು ಪಿ ಯು ಸಿಯನ್ನು ಚನ್ನಪಟ್ಟಣದಲ್ಲಿ ಮಾಡಿ, ನಂತರ ಬಿಎಸ್‌ಇಯನ್ನು ಮಂಡ್ಯದಲ್ಲಿ ಹಾಗೂ ಎಂ ಎಸ್ ಇ ಯನ್ನು ಮೈಸೂರಿನ ವಿಶ್ವವಿದ್ಯಾಲಯದಲ್ಲಿ ಮುಗಿಸಿ ನಂತರ ಚನ್ನಪಟ್ಟಣದ ಜೂನಿಯರ್ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿ ಪಾರ್ಟ್ ಟೈಮ್ ಕೆಲಸ ಮಾಡುತ್ತಾರೆ.

1 ಜುಲೈ 1989 ರಂದು ಕನಕಪುರದ ರೂರಲ್ ಕಾಲೇಜಿಗೆ ಅಧ್ಯಾಪಕರಾಗಿ ಸೇರುವ ಬಾಲಕೃಷ್ಣ ಅವರನ್ನು 2022 ಡಿಸೆಂಬರ್ 24ರಂದು ರೂರಲ್ ಪದವಿ ಕಾಲೇಜಿನ ಪ್ರಾಂಶುಪಾಲರಾಗಿ ಆಡಳಿತ ಮಂಡಳಿ ನೇಮಕ ಮಾಡುತ್ತದೆ.



ಪ್ರಾಂಶುಪಾಲರಾದ ಮೇಲೆ ಕೆಲವೊಂದು ಜವಾಬ್ದಾರಿಯನ್ನು ನಿಭಾಯಿಸ ಬೇಕಾಗುತ್ತದೆ, ಅದೇ ಸಮಯಕ್ಕೆ ಆರ್ ಇ ಎಸ್‌ನ ಅಧ್ಯಕ್ಷರಾಗಿ "ಹೆಚ್ ಕೆ ಶ್ರೀಕಂಠ" ಅವರು ಆಯ್ಕೆ ಆಗುತ್ತಾರೆ. ಕೆಲವು ಕಾಲದಿಂದ ಕಾಲೇಜಿನಲ್ಲಿ ತುರ್ತು ಆಗಿ ಆಗಬೇಕಾದ ಕೆಲಸಗಳು ಬಾಕಿ ಇರುತ್ತದೆ, ಅದನ್ನು ಅಧ್ಯಕ್ಷರಿಗೆ ವಿವರಿಸಿ, ಆ ಕೆಲಸಗಳನ್ನು ಪೂರ್ಣ ಮಾಡಿಸುತ್ತಾರೆ.

ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಎಂ ಟಿ ಬಾಲಕೃಷ್ಣ ಅವರು "ನಾನು ಪ್ರಾಂಶುಪಾಲ ಆದ ಅವಧಿಯಲ್ಲಿ NAAC ನಲ್ಲಿ ಬಿ+ ಬಂತು ಹಾಗೂ ಕಾಲೇಜಿನ ಮೂಲಭೂತ ಅಭಿವೃದ್ಧಿ ಕಾರ್ಯಗಳು ಕಡಿಮೆಅವಧಿಯಲ್ಲಿ ಹೆಚ್ಚಿನ ಕೆಲಸವಾಯಿತು ಇದಕ್ಕೆ ಅಧ್ಯಕ್ಷರಾದ ಶ್ರೀಕಂಠವರು ಕಾರಣ. ಇದೆಲ್ಲವೂ ನನಗೆ ತುಂಬಾ ಖುಷಿ ಕೊಟ್ಟಿದೆ" ಎಂದರು.

ಆರ್ ಇ ಎಸ್ ಅಧ್ಯಕ್ಷರಾದ ಶ್ರೀ ಕ ಂ ಠ ರ ವ ರು ಮಾತನಾಡಿ "ನನಗೆ ನಾಗರಾಜು ಅವರು ಸಂಸ್ಥೆಯಲ್ಲಿ ಏನೆಲ್ಲ ಸಮಸ್ಯೆ ಇದೆ ಎಂದು ತಿಳಿಸಿದರು, ಅದಕ್ಕೆ ಪೂರಕವಾಗಿ ವ್ಯವಸ್ಥೆ ಮಾಡಿದ್ದೇನೆ ಹಾಗೂ ಕಾರ್ಯಕ್ರಮಗಳನ್ನು ಮಾಡಲು ಸಭಾಂಗಣ ಬೇಕು ಎಂದು ಕೇಳಿದರು. ಆಧುನಿಕ ಮಾದರಿಯಲ್ಲಿ "ದೂಂತುರು ಮಾರೇಗೌಡ ಸಭಾಂಗಣ" ಮಾಡಲಾಯಿತು ಎಂದರು"

ಇನ್ನೂ ಕಾರ್ಯಕ್ರಮಕ್ಕೆ ಎಂ ಟಿ ಬಾಲಕೃಷ್ಣ ಅವರ ಕುಟುಂಬವು ಹಾಗೂ ಸ್ನೇಹಿತರು ಆಗಮಿಸಿದರು. ಪದವಿ ಕಾಲೇಜಿನ ಶಿಕ್ಷಕರು, ಮಾಜಿಅಧ್ಯಕ್ಷರು ಸೇರಿದಂತೆ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದರು.

# ತುಮಕೂರು ಷಟಲ್ ಬ್ಯಾಡ್ಮಿಟನ್ ಲೀಗ್–2026 ರ ಚಾಂಪಿಯನ್

ತು ಮ ಕೂ ರು : ತು ಮ ಕೂ ರು ನ ಗ ರ ದ ತು ಮ ಕೂ ರು ಬ್ಯಾಡ್ಮಿಟನ್‌ಅಕಾಡೆಮಿಯ ಅಂಕಣದಲ್ಲಿ ಟೀಮ್ ಸ್ಯಾಷರ್ ಹಾಗೂ ವಿನ್ನೇಟ್ ಇವೆಂಟ್ಸ್‌ಅವರು ಆಯೋಜಿಸಿದ್ದ ತುಮಕೂರು ಷಟಲ್ ಬ್ಯಾಡ್ಮಿಟನ್ ಲೀಗ್–2026 ರ ಚಾಂಪಿಯನ್ ಆಗಿ ಷಟಲ್ ಸ್ಟ್ರೈಕರ್ ಹೊರ ಹೊಮ್ಮಿದ್ದು, 70 ಸಾವಿರ ರೂಗಳ ನಗದು ಬಹುಮಾನ ಮತ್ತುಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ.




ಭಾನುವಾರ ನಡೆದ ಪಂದ್ಯಗಳಲ್ಲಿ ಸೆಮಿಫೈನಲ್ ಪಂದ್ಯದಲ್ಲಿ ಷಟಲ್ ಸ್ಟ್ರೈಕರ್‌ತಂಡತುಮಕೂರಿನಉಲ್ಫ್ ವಾರಿಯರ್ಸ್‌ತಂಡದ ವಿರುದ್ದ ಜಯಗಳಿಸಿ, ಫೈನಲ್ ಪ್ರವೇಶಿಸಿತ್ತು. ಹಾಗೆಯೇಇನ್ನೊಂದು ಬದಿಯಿಂದ ಪವನ ಪ್ಯಾಂಥರ್ಸ್‌ಕುಣಿಗಲ್‌ತಂಡತುಮಕೂರಿನಜಿ. ಆರ್.ಚಾಲೆಂಜರ್ಸ್‌ತಂಡವನ್ನು ಸೋಲಿಸಿ, ಹಂತಿ ಹಂತಕ್ಕೆ ಬಂದಿದ್ದು, ಷಟಲ್ ಸ್ಟ್ರೈಕರ್ ಮತ್ತು ಪವನ ಫ್ಯಾಂಥರ್ಸ್‌ಕುಣಿಗಲ್ ತಂಡಗಳ ನಡುವೆ ನಡೆದಅಂತಿಮ ಹಣಾಹಣಿ ಪಂದ್ಯದಲ್ಲಿಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ 3–1 ಅಂತರದಲ್ಲಿ ಪವನ್ ಫ್ಯಾಂಥರ್ಸ್‌ಕುಣಿಗಲ್‌ತಂಡವನ್ನು ಸೋಲಿಸಿ,ಚಾಂಪಿಯನ್ ಆಗಿ ಹೊರ ಹೊಮ್ಮಿದರೆ,ಟೂರ್ನಿಯಲ್ಲಿ ಒಳ್ಳೆಯ ಪ್ರದರ್ಶನ ನೀಡಿದ ಪವನ್ ಪ್ಯಾಂಥರ್ಸ್‌ಕುಣಿಗಲ್‌ಎರಡನೇ ಸ್ಥಾನದೊಂದಿಗೆಐವತ್ತು ಸಾವಿರ ರೂಗಳ ನಗದು ಬಹುಮಾನಮತ್ತುಟ್ರೋಫಿಯನ್ನುತನ್ನದಾಗಿಸಿಕೊಂಡಿತ್ತು. ಮೂರನೇ ಸ್ಥಾನಕ್ಕಾಗಿ ಉಲ್ಫ್ ವಾರಿಯರ್ಸ್ ಮತ್ತುಜಿ. ಆರ್. ಚಾಲೆಂಜರ್ಸ್‌ತಂಡದ ನಡುವೆ ನಡೆದ ಪಂದ್ಯದಲ್ಲಿಜಿ. ಆರ್.ಚಾಲೆಂಜರ್ಸ್‌ತಂಡಗೆದ್ದು, 30 ಸಾವಿರರೂ ನಗದು ಹಾಗೂ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ.

ಭಾನುವಾರರಾತ್ರಿ ಹತ್ತುಗಂಟೆಯವರೆಗೆ ನಡೆದ ಪಂದ್ಯಾವಳಿಯನ್ನುವೀಕ್ಷಿಸಲು ಸಾವಿರಾರುಕ್ರೀಡಾಪ್ರಿಯರು ನೆರೆದಿದ್ದು,ಆಟಗಾರರ ಪ್ರತಿ ಹೊಡೆತಕ್ಕೂ ಶಿಳ್ಳೆ, ಕೇಕೆ ಹಾಕಿ ಹುರಿದುಂಬಿಸುವ ಮೂಲಕ ಪಂದ್ಯಾವಳಿಗೆ ಮತ್ತಷ್ಟು ಕಳೆ ತುಂಬುವಂತೆ ಮಾಡಿದರು. ವಿಜೇತ ತಂಡಗಳಿಗೆ ಮಾಜಿಕೌನ್ಸಿಲರ್ ಮಂಜುಳ ಅವರು ಬಹುಮಾತನ ವಿತರಿಸಿದರು.

# ಮುಸ್ಲಿಂ ಬಾಂಧವರ ಪವಿತ್ರ ಹಬ್ಬ ರಂಜಾನ್ ಸಡಗರ ಸಂಭ್ರಮ:ಗಣ್ಯರು ಭಾಗಿ

ತುಮಕೂರು– ಮುಸ್ಲಿಂ ಬಾಂಧವರ ಪವಿತ್ರ ಹಬ್ಬಗಳಲ್ಲಿ ಒಂದಾದ ಈದ್ ಉಲ್ ಫಿತರ್ ರಂಜಾನ್ ಹಬ್ಬವನ್ನು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಜಿಲ್ಲೆಯಾದ್ಯಂತ ರಂಜಾನ್ ಪ್ರಯುಕ್ತ ಮಸೀದಿಗಳು, ದರ್ಗಾಗಳನ್ನು ವಿದ್ಯುತ್ ದೀಪಾಲಂಕಾರದಿಂದ ವಿಶೇಷವಾಗಿ ಸಿಂಗರಿಸಲಾಗಿತ್ತು. ನಗರ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲೂ ಸಹ ಮುಸ್ಲಿಂ ಬಾಂಧವರು ರಂಜಾನ್ ಹಬ್ಬವನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಅದ್ದೂರಿಯಾಗಿ ಆಚರಿಸಿದರು.

ನಗರದ ಕುಣಿಗಲ್ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಜಮಾಯಿಸಿದ ಸಾವಿರಾರು ಮುಸ್ಲಿಂ ಬಾಂಧವರು ಈ ಬಾರಿ ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಬೆಳಿಗ್ಗೆ 10ಕ್ಕೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಹೊಸ ಉಡುಪುಗಳನ್ನು ಧರಿಸಿ, ಒಬ್ಬರಿಗೊಬ್ಬರು ಆಲಿಂಗನ ಮಾಡಿ ಹಬ್ಬದ ಶುಭಾಶಯ ಕೋರಿದ್ದು ವಿಶೇಷವಾಗಿತ್ತು.

ರಂಜಾನ್ ಹಬ್ಬದ ಸಂಭ್ರಮ ಹಿಂದೂ ಮತ್ತು ಮುಸ್ಲಿಂ ಬಾಂಧವರ ಭಾವೈಕ್ಯತೆಯ ಸಂಕೇತವಾಗಿ ಮಾರ್ಪಟ್ಟಿದ್ದು, ಮುಸ್ಲಿಂ ಬಾಂಧವರಿಗೆ ಹಿಂದೂ ಸಮುದಾಯದವರು ಸಹ ಹಬ್ಬದ ಶುಭಾಶಯ ಕೋರುವ ಮೂಲಕ ಭಾವೈಕ್ಯತೆಯನ್ನು ಸಾರಿದರು.



ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಶುಭಾಶಯ ಕೋರಿ ಮಾತನಾಡಿದ ಕಾಂಗ್ರೆಸ್ ಮುಖಂಡ ಇಕ್ಬಾಲ್ ಅಹಮದ್, ಪ್ರಪಂಚದಾದ್ಯಂತ ರಂಜಾನ್ ಹಬ್ಬದಲ್ಲಿ 30 ವ್ರತಗಳನ್ನು ಆಚರಿಸಿ, ನಾವೆಲ್ಲರೂ ಅನ್ನ, ಆಹಾರ ಬಿಟು, ಕೆಡಕನ್ನು ಬಿಟ್ಟು ಸಹೋದರತ್ವ, ಸಹಬಾಳ್ವೆಯಿಂದ 30 ದಿನಗಳನ್ನು ಕಳೆದಿದ್ದೇವೆ ಎಂದರು.

ನಾವೆಲ್ಲರೂ 30 ದಿನಗಳ ಉಪವಾಸ ಇದ್ದು, ಜಕಾತ್‌ನ್ನು ಕೂಡ ಆಚರಿಸಿದ್ದೇವೆ. ಜಕಾತ್ ಎಂದರೆ ಪ್ರಪಂಚದ ಮಾನವರಲ್ಲಿ ಅಸಮತೋಲನ ಇದೆ, ಬಡವರು, ವಿಧವೆಯವರು, ಸಂಪತ್ತು ಉಳ್ಳವರು. ಉಳ್ಳವರು ಬಡವರಿಗೆ ತಮ್ಮ ದುಡಿಮೆಯ ಒಂದಷ್ಟು ಭಾಗವನ್ನು ಜಕಾತ್ ನೀಡಿ ಅವರಿಗೂ ಕೂಡ ನಮ್ಮ ಜತೆ ಸಮಪಾಲು–ಸಮಬಾಳು ಒದಗಿಸಿಕೊಡುವುದು ರಂಜಾನ್ ಧ್ಯೇಯ ಎಂದರು.

ಪ್ರಪಂಚದಲ್ಲಿ ನಡೆಯುತ್ತಿರುವ ಯುದ್ಧಗಳು ನಿಲ್ಲಲಿ, ಮಾನವೀಯತೆಯ ಸಂದೇಶ ಎಲ್ಲರಿಗೂ ಹೋಗಲಿ. ಶಾಂತಿ ನೆಲೆಸಲಿ, ಮಳೆ–ಬೆಳೆಯಾಗಲಿ. ಯಾರು ಮೇಲಲ್ಲ, ಯಾರೂ ಕೀಳಲ್ಲ, ನಾವೆಲ್ಲರೂ ಒಂದೇ ಎಂಬುದು ರಂಜಾನ್ ಸಂದೇಶವಾಗಿದೆ ಎಂದು ಅವರು ತಿಳಿಸಿದರು.

ನಗರಸಭೆ ಮಾಜಿ ಅಧ್ಯಕ್ಷ ಅಸ್ಲಾಂಪಾಷ ಮಾತನಾಡಿ, ನಾವೆಲ್ಲಾ 30 ದಿನಗಳ ಕಾಲ ಉಪವಾಸ ವ್ರತ ಮಾಡಿ ರಂಜಾನ್ ಹಬ್ಬವನ್ನು ಆಚರಿಸಿದ್ದೇವೆ. ಹಿಂದೂ–ಮುಸ್ಲಿಂ ಬಾಂಧವರು ಎಲ್ಲರೂ ಒಂದೇ ಎಂಬ ಭಾವೈಕ್ಯತೆಯನ್ನು ಸಾರಿದ್ದೇವೆ ಎಂದು ಹೇಳಿ, ರಂಜಾನ್ ಹಬ್ಬದ ಶುಭಾಶಯ ಕೋರಿದರು.

ಹಬ್ಬದ ಪ್ರಯುಕ್ತ ಕುಣಿಗಲ್ ರಸ್ತೆಯಲ್ಲಿರುವ ಈದ್ಗಾ ಮೈದಾನದ ಸುತ್ತಮುತ್ತ ಬಿಗಿ ಪೊಲೀಸ್ ಬಂದೋ ಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಈದ್ಗಾ ಮೈದಾನಕ್ಕೆ ಮಾಜಿ ಶಾಸಕರಾದ ಡಾ. ರಫೀಕ್ ಅಹಮದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಡಿವೈಎಸ್ಪಿ ಚಂದ್ರಶೇಖರ್, ಸರ್ಕಲ್ ಇನ್ಸ್‌ಪೆಕ್ಟರ್ ರಾಘವೇಂದ್ರ, ಮುಖಂಡರಾದ ಇಕ್ಬಾಲ್ ಅಹಮದ್, ಅಸ್ಲಾಂಪಾಷ, ನಯಾಜ್ ಅಹಮದ್, ರೇವಣಸಿದ್ದಯ್ಯ, ನಯಾಜ್, ಸೇವಾ ದಳದ ಶಿವಪ್ರಸಾದ್, ಗುರುಪ್ರಸಾದ್, ನಟರಾಜಶೆಟ್ಟಿ, ಮಹಮದ್ ಸೈಫ್, ತೋಸಿಫ್, ಫಯಾಜ್ ಅಹಮದ್, ಇರ್ಫಾನ್ ಮತ್ತಿತರರು ಭೇಟಿ ನೀಡಿ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯ ಕೋರಿದರು.

ಮಾರ್ಗ ಬದಲಾವಣೆ

ರಂಜಾನ್ ಹಬ್ಬದ ಅಂಗವಾಗಿ ಮುಸ್ಲಿಂ ಬಾಂಧವರು ಕುಣಿಗಲ್ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವುದರಿಂದ ಯಾವುದೇ ರೀತಿಯ ಅಡಚಣೆಗಳು ಉಂಟಾಗದಂತೆ ಮುಂಜಾಗ್ರತಾ ಕ್ರಮವಾಗಿ ಈ ಮಾರ್ಗದಲ್ಲಿ ಸಂಚರಿಸುವ ವಾಹನಗಳಿಗೆ ಬದಲಿ ಮಾರ್ಗದ ವ್ಯವಸ್ಥೆ ಮಾಡಲಾಗಿತ್ತು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಅವೈಜ್ಞಾನಿಕವಾಗಿ ನೀರು ಅರಿದು ಹೋಗಲು ಕಲ್ವರ್ಟ್ ನಿರ್ಮಾಣ: ನೂರಾರು ಎಕರೆ ಭತ್ತ,ರಾಗಿ,ಅಡಕೆ ತೋಟಗಲ್ಲಿ ನೀರು ತುಂಬಿ ಆರ್ಥಿಕ ನಷ್ಟ

ಕುಣಿಗಲ್ : ರಾಷ್ಟ್ರೀಯ ಹೆದ್ದಾರಿ 75 ರ ಬೈಪಾಸ್ ರಸ್ತೆಗಳ ಹಿಕ್ಕೆಲಗಳಲ್ಲಿ ಅವೈಜ್ಞಾನಿಕವಾಗಿ ನೀರು ಅರಿದು ಹೋಗಲು ಕಲ್ವರ್ಟ್ ನಿರ್ಮಾಣ ಮಾಡಿ ರೈತರ ಕೃಷಿ ಭೂಮಿಗಳ ಮುಳುಗಡೆ ಹೊಂದಿ ನೂರಾರು ಎಕರೆ ಭತ್ತ,ರಾಗಿ,ಅಡಕೆ ತೋಟಗಲ್ಲಿ ನೀರು ತುಂಬಿ ಆರ್ಥಿಕ ನಷ್ಟ ಉಂಟಾಗುತ್ತಿರುವುದರಿಂದ ರೈತರ ಭೂಮಿಗಳಲ್ಲಿ ನೀರು ನಿಲ್ಲದಂತೆ ನಾಲೆಗಳನ್ನು ಅಗಲೀಕರಣ ಮಾಡಿ ಸರಾಗವಾಗಿ ನೀರು ಹರಿಯಲು ವೈಜ್ಞಾನಿಕವಾಗಿ ತೂಬುಗಳ ಸೇತುವೆಯನ್ನು ಮಾಡಿಕೊಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವ ಜಿಲ್ಲಾಧ್ಯಕ್ಷರಾದ ಮುನಿಯಪ್ಪ ನೇತೃತ್ವದಲ್ಲಿ ಸ್ಥಳೀಯ ನೊಂದ ರೈತರು ಪ್ರತಿಭಟನೆ ನಡೆಸಿದರು.

ತಾಲೂಕಿನ ಕಸಬಾ ಹೋಬಳಿ ಹೇರೂರು ಲಕ್ಷ್ಮಿ ದೇವಿ ಹಂತ ಗ್ರಾಮದಲ್ಲಿರುವ ರಾಷ್ಟ್ರೀಯ ಹೆದ್ದಾರಿ 75 ರ ಬೈಪಾಸ್ ರಸ್ತೆಯ ಅಕ್ಕ ಪಕ್ಕದಲ್ಲಿರುವ ಜಮೀನುಗಳಿಗೆ ಪ್ರತಿ ವರ್ಷ ಮಳೆಗಾಲದಲ್ಲಿ ಕುಣಿಗಲ್ ದೊಡ್ಡ ಕೆರೆಯ ನೀರು, ಚಿಕ್ಕ ಕೆರೆಯ ನೀರು, ಬೇಗೂರು ಕೆರೆಯ ನೀರು ಈ ಭಾಗದ ನೂರಾರು ಎಕರೆ ಪ್ರದೇಶಗಳಿಗೆ ಹರಿದು ಬಂದು ರಾಷ್ಟ್ರೀಯ ಹೆದ್ದಾರಿಯಲ್ಲಿ ಅಂಡರ್ ಪಾಸ್ ಅಕ್ಕ ಪಕ್ಕದ ಸುಮಾರು 300 ಎಕರೆ ರೈತರ ತೋಟಗಳ ಅಡಿಕೆ,ತೆಂಗು,ಬಾಳೆ, ಭತ್ತ, ರಾಗಿ ಬೆಳೆಯುವ ಫಲವತ್ತಾದ ಜಮೀನುಗಳಲ್ಲಿ ನೀರು ತುಂಬಿಕೊಂಡು ಸರ್ವಿಸ್ ರಸ್ತೆ ತುಂಬಿ, ರಾಷ್ಟ್ರೀಯ ಹೆದ್ದಾರಿ 75 ರ ರಸ್ತೆಯ ಮೇಲೆ ನೀರು ಹರಿಯುವುದರಿಂದ ರೈತರ ಕೃಷಿ ಭೂಮಿಗಳು ಸಂಪೂರ್ಣವಾಗಿ ಮುಳುಗಡೆಯಾಗುತ್ತಿವೆ, ಮಳೆಗಾಲದಲ್ಲಿ ಜಮೀನುಗಳಿಗೆ ಓಡಾಡಲು ಸಾರ್ವಜನಿಕರಿಗೆ ಹಾಗೂ ಸಣ್ಣಪುಟ್ಟ ವಾಹನಗಳಿಗೆ ವ್ಯವಸ್ಥೆ ಇಲ್ಲದೆ ತೊರೆಯ ನೀರು ವರ್ಷದಲ್ಲಿ ಎಂಟು ತಿಂಗಳು ನೀರು ನಿಲ್ಲುವದರಿಂದ ರೈತರಿಗೆ ತೊಂದರೆಯಾಗುತ್ತಿದ್ದು ಅವೈಜ್ಞಾನಿಕವಾಗಿ ಕಲ್ವರ್ಟ್ ನಿರ್ಮಾಣ



ಹಾಗೂ ಅಂಡರ್ ಪಾಸ್ ಗಳ ಕೊರತೆ, ನಾಲೆ ದುರಸ್ತಿ ಮಾಡದೆ ಇರುವುದರಿಂದ ಕೃಷಿ ಭೂಮಿಗಳ ಮುಳುಗಡೆಯಾಗಿ ರೈತರಿಗೆ ಆರ್ಥಿಕ ನಷ್ಟ ಉಂಟಾಗಿದೆ, ನಿರಂತರವಾಗಿ ನೀರು ಹರಿಯುವುದರಿಂದ ಸರ್ವಿಸ್ ರಸ್ತೆಗೂ ಹಾನಿ ಉಂಟಾಗುತ್ತಿದೆ, ಇದರಿಂದ ರೈತರು ಹಾಗೂ ಪಶುಗಳು ಹೆದ್ದಾರಿಯನ್ನು ದಾಟಿ ಬರಬೇಕಾಗುತ್ತದೆ ಹೆದ್ದಾರಿಗಳಲ್ಲಿ ಅಪಘಾತ ವಾಗಿ ಮಾನವ ಹಾಗೂ ಪಶುಗಳ ಜೀವಕ್ಕೆ ಅಪಾಯವಾಗುವ ಸಂಭವವಿರುತ್ತದೆ.ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಹಾಗೂ ಲೋಕೋಪಯೋಗಿ ಅಧಿಕಾರಿಗಳು ಸೇರಿದಂತೆ ಹೇಮಾವತಿ ಅಧಿಕಾರಿಗಳಿಗೆ ಈಗಾಗಲೇ ಹತ್ತಾರು ದೂರು ಸಲ್ಲಿಸಿದರು ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಆರೋಪಿಸಿದರ. ಈಗಾಗಲೇ ಈ ಭಾಗದ ಲೋಕಸಭಾ ಸದಸ್ಯರಾದ ಸಿ.ಎನ್.ಮಂಜುನಾಥ್ ಹಾಗೂ ರಾಷ್ಟ್ರೀಯ ಹೆದ್ದಾರಿಪ್ರಾಧಿಕಾರದ ಅಧಿಕಾರಿಗಳು ಕಳೆದ ವರ್ಷ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಈ ಭಾಗದ ರೈತರಿಗೆ ಅಂಡರ್ ಪಾಸ್ ನಿರ್ಮಾಣ, ನಾಳೆಗಳ ದುರಸ್ತಿ, ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆತಂಕ ವ್ಯಕ್ತಪಡಿಸಿ ಅಕ್ಕ ಪಕ್ಕದ ಸುಮಾರು 300 ಎಕರೆ ಕೃಷಿ ಭೂಮಿ ಬೆಳೆ ನಷ್ಟವಾಗುವುದರಿಂದ ಯಾವುದೇ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ ರೈತರು ಲಕ್ಷಾಂತರ ರೂಗಳ ಆರ್ಥಿಕ ಸಂಕಷ್ಟದಿಂದ ನಿರಂತರವಾಗಿ ನೋವು ಅನುಭವಿಸುತ್ತಾ ಬೆಳೆಗಳ ಹಾನಿ ಉಂಟಾಗುತ್ತಿವೆ ಸಂಬಂಧಪಟ್ಟ ಲೋಕೋಪಯೋಗಿ, ಹೇಮಾವತಿ ಅಧಿಕಾರಿಗಳು,ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಅಧಿಕಾರಿಗಳು ರೈತರ ನೆರವಿಗೆ ತುರ್ತಾಗಿ ಧಾವಿಸಿ ರೈತರ ಸಂಕಷ್ಟವನ್ನು ಪರಿಹರಿಸಬೇಕು ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ರೈತ ಪರ್ವ ಉಪಾಧ್ಯಕ್ಷ ಮೊಹಮ್ಮದ್ ಇರ್ಫಾನ್ ಅಲಿ, ರೈತ ಪರ್ವ ಮುಖಂಡರಾದ ಉಮಾಶಂಕರ್,ಪುಟ್ಟ ರೇವಣ್ಣ ಲಾಳಾಪುರ, ವೆಂಕಟೇಶ್ ಹೇರೂರು, ಅಬ್ದುಲ್ ತಾಯಕ್, ತಿಮ್ಮಯ್ಯ,ಟಿ ಎನ್ ನರಸಿಂಹಮೂರ್ತಿ, ಶಿವಣ್ಣ ,ಮಂಜುನಾಥ್ ಶೆಟ್ಟಿಗೆಹಳ್ಳಿ,ಜೈಕುಮಾರ, ನಿಂಗಪ್ಪ, ಡಾಬಾ ಕೃಷ್ಣಪ್ಪ, ರಾಜಣ್ಣತೆಪ್ಪಸಂದ್ರ,ಕೃಷ್ಣಯ್ಯ ಸೇರಿದಂತೆ ಅನೇಕ ರೈತ ಮುಖಂಡರು ಭಾಗವಹಿಸಿದ್ದರು.

# ಮನುಷ್ಯನ ನೆಮ್ಮದಿಯ ಬದುಕಿಗೆ ಉತ್ತಮ ಆರೋಗ್ಯ ಮತ್ತು ಗುಣಮಟ್ಟದ ಶಿಕ್ಷಣ ಅತ್ಯಗತ್ಯ

ಮಧುಗಿರಿ: ಮನುಷ್ಯನ ನೆಮ್ಮದಿಯ ಬದುಕಿಗೆ ಉತ್ತಮ ಆರೋಗ್ಯ ಮತ್ತು ಗುಣಮಟ್ಟದ ಶಿಕ್ಷಣ ಅತ್ಯಗತ್ಯ ಎಂದು ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ಅಭಿಪ್ರಾಯ ಪಟ್ಟರು..

ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಶ್ರೀ ಸಿದ್ದಗಂಗಾ ಹಾಸ್ಪಿಟಲ್ ಡಯಾಲಿಸಿಸ್ ಸೆಂಟರ್ ಮಧುಗಿರಿ, ಹಾಗೂ ಶ್ರೀ ಶಾರದಾ ದೇವಿ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಪಾವಗಡ , ಮಧುಗಿರಿ ಶಾಖೆಯ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ದಿವ್ಯಸಾನಿಧ್ಯ ವಹಿಸಿ ಮಾತನಾಡುತ್ತಾ ಮನುಷ್ಯ ಬದುಕಲು ಶುದ್ದವಾದ ಗಾಳಿ, ನೀರು ಆಹಾರ ಜೊತೆಗೆ ವಸತಿ ಬಹುಮುಖ್ಯ. ಇದರ ಜೊತೆಗೆ 21 ನೇ ಶತಮಾನದ ಆಧುನಿಕ ವಿಜ್ಞಾನ, ತಂತ್ರಜ್ಞಾನದ ಜಗತ್ತಿನಲ್ಲಿ ನೆಮ್ಮದಿಯಾಗಿ ಜೀವಿಸಲು ಶಿಕ್ಷಣ ಮತ್ತು ಆರೋಗ್ಯಸೇವೆಯೂ ಅವಶ್ಯಕವಾಗಿದೆ.

ಕೇವಲ ಸರ್ಕಾರದಿಂದ ಮಾತ್ರ ಎಲ್ಲಾ ಸೇವೆಗಳನ್ನು ಪೂರೈಸಲು ಸಾಧ್ಯವಿಲ್ಲ. ಸಮಾಜವೂ ಸರ್ಕಾರದ ಜೊತೆಗೆ ಕೈಜೋಡಿಸಬೇಕು. ಸಮಾಜದ ಸೇವೆಯೆ ದೈವದಸೇವೆ ಎಂದು ಹೆಚ್.ಸಿ.ಬಸವರಾಜು ಮತ್ತು ಹೆಚ್.ಸಿ.ವೀರಭದ್ರಪ್ಪ ಕುಟುಂಬದವರು ದೂರದೃಷ್ಟಿಯ ಆಲೋಚನೆಯಿಂದ ಈ ಆರೋಗ್ಯ ಸೇವಾಸೌಧ ನಿರ್ಮಾಣಕ್ಕೆ ಕೈಜೋಡಿಸಿದ್ದಾರೆ.

ಬದಲಾಗುತ್ತಿರುವ ಯಾಂತ್ರೀಕೃತ ಬದುಕಿನಲ್ಲಿ ಮನುಷ್ಯ ಸೋಮಾರಿಯಾಗದೆ ದೇಹ ದಂಡಿಸಬೇಕು. ಜೀವನ ಶೈಲಿ ಬದಲಾದಂತೆ ಮನುಷ್ಯ ಬದಲಾವಣೆ ಯಾಗಿ ಆರೋಗ್ಯದ ಬಗ್ಗೆ ಜಾಗೃತರಾಗಬೇಕು ಎಂದರು. ಬಡವರ ನೊಂದವರಿಗೆ ಸಹಾಯಹಸ್ತ ಚಾಚುತ್ತಿರುವ ಜಪಾನಂದ ಶ್ರೀಗಳ ಸಮಾಜಸೇವೆ ಶ್ಲಾಘನೀಯವಾದದ್ದು ಎಂದರು. ಸಿದ್ದಗಂಗಾ ಮಠದ ಹಿರಿಯ



ಸ್ವಾಮೀಜಿ ಯವರ ಅಪ್ಪಣೆ ಪಡೆದು ಶೀಘ್ರವಾಗಿ ಮಧುಗಿರಿಯಲ್ಲಿ ಆಧುನಿಕ ಮತ್ತು ಉತ್ತಮ ಗುಣಮಟ್ಟದ ಹೃದ್ರೋಗ ವಿಭಾಗವನ್ನು ಆರಂಭಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಶ್ರೀ ಜಪಾನಂದ ಸ್ವಾಮೀಜಿ ಮಾತನಾಡಿ ರೋಗಿಗಳಿಗೆ ವೇದ್ಯರೇ ದೇವರು, ಸೇವೆಯೆ ದೊಡ್ಡ ಧರ್ಮ . ಮಧುಗಿರಿ, ಕೊರಟಗೆರೆ , ಶಿರಾ ಪಾವಗಡ ಜನತೆಗೆ ಅನುಕೂಲವಾಗಲೆಂದು ಕಣ್ಣಿನ ಆಸ್ಪತ್ರೆ ಆರಂಬಿಸಿದೆವು. ಸಿದ್ದಗಂಗಾ ಶ್ರೀಗಳ ಸಹಕಾರದಿಂದ ಡಯಾಲಿಸಿಸ್ ಕೇಂದ್ರವನ್ನು ತೆರೆದು ಒಂದು ವರ್ಷವಾಗಿದೆ. ಈವರೆಗೆ 1500 ರೋಗಿಗಳಿಗೆ ಡಯಾಲಿಸಿಸ್ ನಡೆಸಲಾಗಿದೆ. 2000 ಕ್ಕೂ ಹೆಚ್ಚು ಜನರಿಗೆ ಕಣ್ಣಿನ ಚಿಕಿತ್ಸೆ ನೀಡಿದ್ದು, 100 ಕ್ಕೂ ಹೆಚ್ಚು ಜನರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಈ ಸೇವಾ ಯಜ್ಞಕ್ಕೆ ಹೆಚ್.ಸಿ.ಬಸವರಾಜು ಮತ್ತು ವೀರಭದ್ರಪ್ಪ ನವರ ಕುಟುಂಬದ ಕೊಡುಗೆಯನ್ನು ಸ್ಮರಿಸಿದರು. ಗ್ರಾಮೀಣ ಭಾಗದಲ್ಲಿ ಇತ್ತೀಚೆಗೆ ಹೃದಯ ಸಂಬಂಧಿ ಖಾಯಿಲೆಗಳು ಹೆಚ್ಚಾಗಿತ್ತಿದ್ದು ತಿಂಗಳಿಗೊಮ್ಮೆ ಸಿದ್ದಗಂಗಾ ಆಸ್ಪತ್ರೆ ವತಿಯಿಂದ ಹೃದ್ರೋಗ ತಪಾಸಣ ಶಿಬಿರ ಏರ್ಪಡಿಸಬೇಕು ಎಂದು ಮನವಿ ಮಾಡಿದರು. ಗ್ರಾಮೀಣ ಜನರಿಗೆ ಅನುಕೂಲವಾಗಲೆಂದು ಈ ಭಾಗದಲ್ಲಿ ಆಸ್ಪತ್ರೆ ತೆರೆದಿದ್ದು ಸದ್ಬಳಕೆಯಾಗಲಿ ಎಂದರು.

ಕಾರ್ಯಕ್ರಮದಲ್ಲಿ ಸಿದ್ದಗಂಗಾ ಮೆಡಿಕಲ್ ಕಾಲೇಜಿನ ಸಿಇಒ ಡಾ ಎಸ್.ಸಚ್ಚಿದಾನಂದ್ ಮಾತನಾಡಿ ತಾಲೂಕು ಮಟ್ಟದಲ್ಲಿ ಡಯಾಲಿಸಿಸ್ ಕೇಂದ್ರ ತೆರೆದಿರುವುದು ಶ್ಲಾಘನೀಯ ವಾಗಿದೆ. ಜಪಾನಂದ ಶ್ರೀಗಳು ಕಣ್ಣಿನ ಆಸ್ಪತ್ರೆ ಜೊತೆಗೆ ಕುಷ್ಟರೋಗಿಗಳು ಮತ್ತು ಕ್ಷಯರೋಗಿಗಳಿಗೂ ಆರೋಗ್ಯ ಸೇವೆ ನೀಡಿದ್ದಾರೆ. ಶೀಘ್ರವಾಗಿ ಮಧುಗಿರಿಯಲ್ಲಿ ಹೃದ್ರೋಗ ಚಿಕಿತ್ಸೆಗೆ ಒಪಿಡಿ ಸೌಲಭ್ಯ ಆರಂಭಿಸಲಾಗುವುದು ಎಂದರು.

ಸಿದ್ದಗಂಗಾ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ.ಶಾಲಿನಿ ಮಾತನಾಡಿ ಸಿದ್ದಗಂಗಾ ಮಠವು ತ್ರಿವಿಧ ದಾಸೋಹಿ ಮಠವಾಗಿದೆ. ಅಕ್ಷರ ಅನ್ನ ಆರೋಗ್ಯ ಸೇವೆ ನೀಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಆನಂದ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಹೆಚ್.ಬಿ.ಶಿವಕುಮಾರ್, ಹೆಚ್.ವಿ.ವೀರೇಶ್, ಹೆಚ್.ಬಿ.ರುದ್ರೇಶ್, ಎನ್.ಎಂ.ಶಿವಕುಮಾರ್, ಅನುರಾಧ ಉಮಾಶಂಕರ್, ಅಕ್ಷಯ್, ಡಾ. ಎಂ.ಎನ್. ಸಂಜೀವಕುಮಾರ್, ಹೆಚ್.ವಿ.ನಟರಾಜ್, ಡಾ.ಅರುಣ್, ಡಾ.ಮಹಾದೇವ್, ಎಂ.ಜಿ.ಎಂ ಸಂಸ್ಥೆಯ ಕಾರ್ಯದರ್ಶಿ ಎಂ.ಎಸ್.ಶಂಕರ್ ನಾರಾಯಣ, ಎಂ.ಜಿ.ಶ್ರೀನಿವಾಸಮೂರ್ತಿ, ಕಸಾಪ ಅಧ್ಯಕ್ಷೆ ಸಹನಾ ನಾಗೇಶ್, ಸಂಯೋಜಕರಾದ ಶಶಿಕುಮಾರ್

# ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ, ಸರ್ಕಾರ ತಕ್ಷಣ ಸ್ಪಂದಿಸುವಂತೆ ಮಾಜಿ ಶಾಸಕ ಮನವಿ.

ಶಿರಾ : ಕಳೆದ ಎರಡು ದಿನಗಳ ಹಿಂದಷ್ಟೇ ತಾಲ್ಲೂಕಿನ ತಡಕಲೂರು ದಿಬ್ಬದಹಟ್ಟಿ ಗ್ರಾಮ ಒಳಗೊಡಂತೆ ತಾಲ್ಲೂಕಿನ ಬಹುತೇಕ ಕಡೆ ಸುರಿದ ಅಕಾಲಿಕ ಆಲಿಕಲ್ಲು ಮಳೆಯಿಂದ ದಾಳಿಂಬೆ ಪಪ್ಪಾಯ ಸೇರಿದಂತೆ ಇತರೆ ವಾಣಿಜ್ಯ ಬೆಳೆಗಳು ಸಂಪೂರ್ಣ ಹಾನಿಯಾಗಿದ್ದು ರೈತರು ಆರ್ಥಿಕವಾಗಿ ನಷ್ಟ ಅನುಭವಿಸಿದ್ದು, ಸಂಕಷ್ಟದಲ್ಲಿರುವ ರೈತರ ನೆರವಿಕೆ ಸಂಬಂಧಪಟ್ಟ ಸಚಿವರು ಹಾಗೂ ಇಲಾಖಾ ಅಧಿಕಾರಿಗಳು ಸ್ಪಂದಿಸಿ ಸೂಕ್ತ ಪರಿಹಾರ ನೀಡುವಂತೆ ಮನವಿ ಮಾಡಿದ ಮಾಜಿ ಶಾಸಕ ಡಾ. ಸಿ. ಎಂ. ರಾಜೇಶ್ ಗೌಡ.

ಅವರು ತಾಲ್ಲೂಕಿನಲ್ಲಿ ಹಾನಿಗೊಳಗಾದ ರೈತರ ಜಮೀನನುಗಳಿಗೆ ಭೇಟಿ ನೀಡಿ, ಖುದ್ದು ವೀಕ್ಷಿಸಿ ರೈತರೊಡನೆ ಚರ್ಚಿಸಿ ಮಾಹಿತಿ ಪಡೆದು ಹಾನಿಗೊಳಗಾದ ರೈತರಿಗೆ ಸರ್ಕಾರದಿಂದ ವಿಶೇಷವಾಗಿ ಪರಿಹಾರ ಕೊಡಿಸುವ ಪ್ರಯತ್ನದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೂ ಹಾಗೂ ಸಚಿವರಿಗೂ ದೂರವಾಣಿ ಮೂಲಕ ಕರೆ ಮಾಡಿ ತಾಲ್ಲೂಕಿನ ರೈತರ ಸಂಕಷ್ಟದ ಕುರಿತು ಮಾಹಿತಿ ನೀಡಿ ತುರ್ತಾಗಿ ಹಾನಿಗೊಳಗಾದ ರೈತರ ಬೆಳೆಗಳಿಗೆ ಸೂಕ್ತ ಪರಿಹಾರ ನೀಡುವಂತೆ ಮನವಿ ಮಾಡಿದರು.

ರೈತರು ನಮ್ಮ ದೇಶದ ಬೆನ್ನೆಲುಬಾಗಿದ್ದು, ಅವರ ಸಂಕಷ್ಟದ



ಸಂದರ್ಭದಲ್ಲಿ ಸರ್ಕಾರವು ತಕ್ಷಣ ಸ್ಪಂದಿಸಿ ನೆರವಾಗುವುದು ಅತ್ಯಂತ ಅಗತ್ಯವಾಗಿದೆ.

ಇತ್ತೀಚೆಗೆ ಸಿರಾ ತಾಲ್ಲೂಕಿನ ಗೋಣಿಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಸುರಿದ ಆಲಿಕಲ್ಲು ಮಳೆಯಿಂದ ರೈತರಿಗೆ ಭಾರೀ ಪ್ರಮಾಣದ ಬೆಳೆ ನಷ್ಟ ಉಂಟಾಗಿದೆ. ವಿಶೇಷವಾಗಿ ದಾಳಿಂಬೆ, ಟೊಮಾಟೋ ಹಾಗೂ ಮಾವಿನ ತೋಟಗಳು ಹೆಚ್ಚಿನ ಪ್ರಮಾಣದಲ್ಲಿ ಹಾನಿಗೊಳಗಾಗಿದ್ದು, ಹಲವು ತಿಂಗಳ ಪರಿಶ್ರಮ ಒಂದೇ ಕ್ಷಣದಲ್ಲಿ ನಾಶವಾಗಿದೆ.ಇಂತಹ ವಾಣಿಜ್ಯ ಬೆಳೆಗಳ ಮೇಲೆ ಅವಲಂಬಿತರಾಗಿದ್ದ ರೈತರಿಗೆ ಬರಸಿಡಿಲು ಬಡಿದಂತಾಗಿದೆ, ಇವುಗಳಿಂದಲೇ ಅವರ ಕುಟುಂಬಗಳ ಜೀವನೋಪಾಯ ನಡೆಯುತ್ತಿದ್ದು, ಮಕ್ಕಳ ಶಿಕ್ಷಣ ಹಾಗೂ ದೈನಂದಿನ ಖರ್ಚುಗಳಿಗೂ ಇದೇ ಪ್ರಮುಖ ಆದಾಯ ಮೂಲವಾಗಿದೆ. ಈ ರೀತಿಯ ಪ್ರಕೃತಿ ವಿಕೋಪದಿಂದಾಗುವ ಅನಾಹುತಗಳಿಂದ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ತಕ್ಷಣವೇ ಹಾನಿಗೊಳಗಾದ ಪ್ರದೇಶಗಳಲ್ಲಿ ಸಮಗ್ರ ಸಮೀಕ್ಷೆ ನಡೆಸಿ, ನಷ್ಟದ ಸರಿಯಾದ ಅಂದಾಜು ಮಾಡಿ, ರೈತರಿಗೆ ತುರ್ತು ಪರಿಹಾರವನ್ನು ಒದಗಿಸಬೇಕು, ಜೊತೆಗೆ ಬೆಳೆ ವಿಮೆ ಯೋಜನೆಗಳ ಅಡಿಯಲ್ಲಿ ಪರಿಹಾರವನ್ನು ಶೀಘ್ರವಾಗಿ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದರು.

ರೈತರಾದ ಮಹೇಶ್, ರವಿಕುಮಾರ್, ತಿಪ್ಪೇಸ್ವಾಮಿ, ಶಾಂತಕುಮಾರ್, ಶಿವರಾಜ್, ಗಿರೀಶ್, ರಾಮಚಂದ್ರಪ್ಪ, ರಂಗಸ್ವಾಮಿ, ಮದು,

# ನ್ಯಾ.ನಾಗಮೋಹನ್ ದಾಸ್‌ಆಯೋಗ ನೀಡಿರುವ ಒಳಮೀಸಲಾತಿ ವರ್ಗೀಕರಣ ವರದಿ ಅತ್ಯಂತ ಅವೈಜ್ಞಾನಿಕ

ತುಮಕೂರು: ಸುಪ್ರಿಂಕೋರ್ಟಿನ ನಿರ್ದೇಶನದ ಮೇಲೆ ಸರಕಾರ ರಚಿಸಿದ್ದ ನ್ಯಾ.ನಾಗಮೋಹನ್ ದಾಸ್‌ಆಯೋಗ ನೀಡಿರುವ ಒಳಮೀಸಲಾತಿ ವರ್ಗೀಕರಣ ವರದಿ ಅತ್ಯಂತ ಅವೈಜ್ಞಾನಿಕವಾಗಿದ್ದು, ಸರಕಾರಅದನ್ನುರದ್ದು ಪಡಿಸಿ,27 ಫೆಬ್ರವರಿ 2026 ರಂದು ಹೊರಡಿಸಿರುವ ಆದೇಶದಂತೆ ಒಳಮೀಸಲಾತಿ ರಹಿತ ನೇಮಕಾತಿ ಆದಿಸೂಚನೆ ಹೊರಡಿಸಬೇಕೆಂದು ಆಗ್ರಹಿಸಿ ಮಾ.25 ರಂದು ಉರಿಲಿಂಗಿ ಪೆದ್ದಿ ಮಠದ ಶ್ರೀಜ್ಞಾನಪ್ರಕಾಶ್ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರಿನ ಪ್ರೀಡಂ ಪಾರ್ಕಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ತುಮಕೂರಿನಿಂದ 25 ಸಾವಿರಕ್ಕು ಹೆಚ್ಚು ಜನರು ಭಾಗವಹಿಸುವುದಾಗಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ಜಿಲ್ಲಾ ಮುಖಂಡರಾದ ಸಿ.ಭಾನುಪ್ರಕಾಶ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿಮಾತನಾಡಿದಅವರು,ನ್ಯಾ.ನಾಗಮೋಹನ್‌ದಾಸ್ ನೀಡಿರುವ ವರದಿ ಅತ್ಯಂತಅವೈಜ್ಞಾನಿಕವಾಗಿದ್ದು, ದೋಷಪೂರಿಕ ಮತ್ತು ಪಕ್ಷ ಪಾತದಿಂದಕೂಡಿದೆ.ಗೊಂದಲ ಬಗೆಹರಿಸುವ ಬದಲು, ಹೊಲಯ ಸಮುದಾಯದ ತಲೆಯ ಮೇಲೆ ಚಪ್ಪಡಿಕಲ್ಲು ಎಳೆಯುವ ಪ್ರಯತ್ನವನ್ನು ಮಾಡಿದೆಎಂದು ಆರೋಪಿಸಿದರು.

ಒಳಮೀಸಲಾತಿಯೂ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಸಮಾನವಾಗಿ ಹಂಚಿಕೆಯಾಗ ಬೇಕಾದರೆ ಮೀಸಲಾತಿಯ ಪ್ರಮಾಣ ಹೆಚ್ಚಾಗಬೇಕು.ಸರಕಾರ ಕೇವಲ 1 ಜಾತಿಯಒತ್ತಡಕ್ಕೆ ಮಣಿದು ಶೇ15ರ ಮೀಸಲಾತಿಯಲ್ಲಿಯೇ ಒಳಮೀಸಲಾತಿ ಜಾರಿಗೊಳಿಸಲು ಹೊರಟಿರುವುದು ಸರಿಯಾದ ಕ್ರಮವಲ್ಲ.ನಮ್ಮ ವಿರೋಧದ ನಡುವೆಯೂ ಒಳಮೀಸಲಾತಿ ಜಾರಿಗೊಳಿಸಲು ಮುಂದಾದರೆ ಬಲಗೈ ಸಮುದಾಯಗಳ ವಿರೋಧವನ್ನು ಎದುರಿಸಬೇಕಾಗುತ್ತದೆ



ಎಂದು ಎಚ್ಚರಿಸಿದರು. ಡಿಸಿಎಂಎಸ್ ನ ಅಧ್ಯಕ್ಷರಾದಡಾ.ಚಂದ್ರಪ್ಪ ಮಾತನಾಡಿ, ಸರಕಾರ ಅವೈಜ್ಞಾನಿಕ ಮತ್ತು ದೋಷ ಪೂರಿತವಾದ ನ್ಯಾ.ನಾಗ ಮೋಹನ್‌ದಾಸ್ ವರದಿಯನ್ನು ತಿರಸ್ಕರಿಸಬೇಕು .ಓಬಿಸಿ ಆಯೋಗದ ಸಮೀಕ್ಷಾ ವರದಿಯನ್ನು ನ್ಯಾ.ನಾಗಮೋಹನ್‌ದಾಸ್ ವರದಿಗೆ ತಾಳೆಹಾಕಿ, ವೆತ್ಯಾಸಕಂಡು ಬಂದರೆ ಮತ್ತೊಮ್ಮೆ ಸಮೀಕ್ಷೆ ನಡೆಸಬೇಕು.ರಾಜ್ಯ ಸರಕಾರವೂ 03-09-2025 ರಂದುಯಾವುದೇ ಮಾನದಂಡವಿಲ್ಲದೆ ಹೊರಡಿಸಿರುವ ಮೀಸಲಾತಿಆದೇಶವನ್ನು ಹಿಂಪಡೆಯಬೇಕು. ಜಾತಿ ಪ್ರಮಾಣ ಪತ್ರಗಳಲ್ಲಿ ಮೂಲ ಜಾತಿಯ ನಮೂದೆನೆ ಕಡ್ಡಾಯಗೊಳಿಸುವುದು, ಈಗಾಗಲೇ ಇರುವಜಾತಿ ಪ್ರಮಾಣ ಪತ್ರಗಳನ್ನು ಹೊಸ ಜಾತಿ ಪ್ರಮಾಣ ಪತ್ರಗಳೊಂದಿಗೆ ಪರಿಗಣಿಸಲು ಸೂಕ್ತ ಆದೇಶ ಹೊರಡಿಸಬೇಕು. ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಸೇರಿರುವ 63 ಜಾತಿಗಳನ್ನು ಒಂದು ಗುಂಪಿಗೆ ತಂದುಉದ್ಯೋಗ, ಶಿಕ್ಷಣ ಇತರೆ ಸೌಲಭ್ಯ ಪಡೆಯಲುಆದೇಶ ಹೊರಡಿಸಬೇಕು. ನ್ಯಾ.ನಾಗಮೋಹನ್‌ದಾಸ್ ವರದಿಯಲ್ಲಿ ಕೆಲ ಜಿಲ್ಲೆಗಳಲ್ಲಿ ಬಲಗೈ ಜಾತಿಗಳ ಸಂಖ್ಯೆಯನ್ನುಅತಿಕಡಿಮೆ ನಮೂದಿಸಿದ್ದು,ಪುನರ್ ಪರಿಶೀಲನೆನಡೆಸಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟು ಮಾ.25 ರಂದು ಸ್ವಾತಂತ್ರ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಲಕ್ಷಾಂತರ ಜನರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಮುಖಂಡರಾದ ಶ್ರೀನಿವಾಸ್ ಮಾತನಾಡಿ, ಸರಕಾರದ ಮೀಸಲಾತಿ ಅನ್ವಯ ಇತ್ತೀಚಿನ ನೇಮಕಾತಿ ಮತ್ತು ಶೈಕ್ಷಣಿಕ ಪ್ರವೇಶಗಳಲ್ಲಿನ ರೋಸ್ಟರ್ ಬಿಂದುಗಳನ್ನು ಅವಲೋಕಿಸಿದರೆ ಬಲಗೈ ಸಮುದಾಯ ಸೇರಿದಂತೆ ಎಲ್ಲಾ ಸಮುದಾಯಗಳಿಗೆ ಬಾರಿ ಅನ್ಯಾಯವಾಗಲಿದೆ.ನಾವು ಮೀಸಲಾತಿ ವಿರೋಧಿಗಳಲ್ಲ. ಆದರೆಇದೇರೋಸ್ಟರ್ ಬಿಂದು ಮುಂದುವರೆದರೆ ಪರಿಶಿಷ್ಟ ಜಾತಿಯಲ್ಲಿರುವಒಂದು ವರ್ಗವನ್ನು ಹೊರತು ಪಡಿಸಿ, ಉಳಿದ ವರ್ಗಗಳಿಗೆ ಉದ್ಯೋಗ, ಶಿಕ್ಷಣ, ಆರ್ಥಿಕ ಸವಲತ್ತುಗಳು ದೊರೆಯುವುದು ಮರಿಚೀಕೆ. ಹಾಗಾಗಿ ಇದರ ವಿರುದ್ದ ಹೋರಾಟ ಅನಿವಾರ್ಯವಾಗಿದೆಎಂದರು.

ಸುದ್ದಿಗೋಷ್ಠಿಯಲ್ಲಿ ಛಲವಾದಿ ಶೇಖರ್, ಸಿದ್ದಲಿಂಗಯ್ಯ, ಭೈರೇಶ್, ಕೃಷ್ಣಪ್ಪ ಹೆಗ್ಗೆರೆ, ಗಿರಿಜೇಶ್,ಜಿ.ಆರ್, ಅಪ್ಪಾಜಯ್ಯ, ಇಂದ್ರಕುಮಾರ್, ವಕೀಲರಾದ ನಾಗೇಶ್, ಗಂಗಾಂಜನೇಯ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಮಾ. 25ರಂದು ಇ-ಆಸ್ತಿ ಆಂದೋಲನ

ತುಮಕೂರು: ಕಂದಾಯ ಶಾಖೆಯ ವತಿಯಿಂದ ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.14, 15 ಮತ್ತು 29ರಲ್ಲಿ ಬರುವ ಎಲ್ಲಾ ಆಸ್ತಿ ಮಾಲೀಕರಿಗಾಗಿ ಮಾರ್ಚ್ 25ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಅಮರಜ್ಯೋತಿ ನಗರದ ಉದ್ಯಾನವನದ ಸಾರ್ವಜನಿಕ ಗ್ರಂಥಾಲಯದಲ್ಲಿ ಇ-ಆಸ್ತಿ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆಸಕ್ತರು ನೋಂದಾಯಿತ ಕ್ರಯಪತ್ರ/ ದಾನಪತ್ರ/ ವಿಭಾಗಪತ್ರ/ ವಿಲ್ ಪತ್ರ, ಭೂಪರಿವರ್ತನಾ ಆದೇಶ ಪ್ರತಿ, ಲೇಔಟ್ ಪ್ರತಿ ಅಥವಾ ಎಂ.ಎ.ಆರ್.19ರ ನಕಲು ಪ್ರತಿ, 01-04-2004ರಿಂದ ಪ್ರಸ್ತುತ ಸಾಲಿನವರೆಗೆ ಇ.ಸಿ.(ನಮೂನೆ-15), ಸ್ವತ್ತಿನ ಜಿ.ಪಿ.ಎಸ್. ಭಾವಚಿತ್ರ, ಮಾಲೀಕರ ಭಾವಚಿತ್ರ, ಆಧಾರ್ ಕಾರ್ಡ್ ಮತ್ತು ಪ್ರಸ್ತುತ ಸಾಲಿನವರೆಗೆ ಕಂದಾಯ ಪಾವತಿಸಿರುವ ರಶೀದಿ ಸೇರಿದಂತೆ ಮತ್ತಿತರೆ ದಾಖಲೆಗಳೊಂದಿಗೆ ಹಾಜರಾಗಿ ತಮ್ಮ ಸ್ವತ್ತಿಗೆ ಇ-ಆಸ್ತಿಯನ್ನು ಪಡೆಯಬಹುದಾಗಿದೆ.

ಸಾರ್ವಜನಿಕರು ವೆಬ್‌ಸೈಟ್ https://www.eaasthi.karnataka.gov.in ಮೂಲಕ ತುಮಕೂರು ಒನ್, ಸೈಬರ್ ಸೆಂಟರ್ ಹಾಗೂ ಸಿಟಿಜನ್ ಲಾಗಿನ್‌ನಲ್ಲಿ ಅರ್ಜಿದಾರರೇ ಸ್ವತಃ ಅರ್ಜಿ ಸಲ್ಲಿಸಿ ಇ-ಆಸ್ತಿ ಪಡೆಯಲು ಅವಕಾಶ ಕಲ್ಪಸಲಾಗಿದ್ದು, ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಪಾಲಿಕೆ ಆಯುಕ್ತ ಶುಭ ಮನವಿ ಮಾಡಿದ್ದಾರೆ.

## ಸ್ವಾಂದೇನಹಳ್ಳಿ: ಮಾ.27ರಂದು ಶ್ರೀ ರಂಗನಾಥಸ್ವಾಮಿಯವರ ಬ್ರಹ್ಮರಥೋತ್ಸವ

ತುಮಕೂರು: ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಸ್ವಾಂದೇನಹಳ್ಳಿ ಬೆಟ್ಟದ ಮೇಲಿರುವ(ದೇವರಾಯನ ದುರ್ಗದ ಅರಣ್ಯ ಪ್ರದೇಶ) ಶ್ರೀ ರಂಗನಾಥಸ್ವಾಮಿಯವರ ಬ್ರಹ್ಮರಥೋತ್ಸವವನ್ನು ಸ್ವಾಂದೇನಹಳ್ಳಿ ಗ್ರಾಮದಲ್ಲಿ ಮಾರ್ಚ್ 27ರಂದು ಮಧ್ಯಾಹ್ನ 1.30 ರಿಂದ 2 ಗಂಟೆಯೊಳಗೆ ನಡೆಸಲಾಗುವುದು.

ರಥೋತ್ಸವದ ದಿನದಂದು ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಮಾರ್ಚ್ 26 ರಿಂದ 30ರವರೆಗೆ ಶ್ರೀ ರಂಗನಾಥಸ್ವಾಮಿಯವರ ಜಾತ್ರೆ ನಡೆಯಲಿದ್ದು, ಜಾತ್ರೆಯ ಪ್ರಯುಕ್ತ ಮಾ.26ರಂದು ವಿಷ್ಣುಕ್ಷೇನ ದೇವತಾರಾಧನ ಪೂರ್ವಕ ಸ್ವಸ್ತಿ ಪುಣ್ಯಾಹವಾಚನ, ಅಂಕುರಾರೋಹಣ ಬೆಟ್ಟದ ಮೇಲೆ ಧ್ವಜಾರೋಹಣ, ಕಲ್ಯಾಣೋತ್ಸವ, ಶ್ರೀ ದೊಡ್ಡಯ್ಯಸ್ವಾಮಿ ಮತ್ತು ಶ್ರೀರಂಗನಾಥಸ್ವಾಮಿಯವರಿಗೆ ಪಂಚಾಮೃತಾಭಿಷೇಕ ಸೇವೆಗಳು ಜರುಗಲಿವೆ. ಮಾ.27ರಂದು ರಾತ್ರಿ ರಥೋತ್ಸವ, ಗರುಡೋತ್ಸವ, ಶೇಷವಾಹನೋತ್ಸವ, ಧವನೋತ್ಸವ; ಮಾ.28, 29ರಂದು ಉತ್ಸವಗಳು ಹಾಗೂ ಮಾ.30ರಂದು ಧ್ವಜಾರೋಹಣ, ಕಂಕಣ ವಿಸರ್ಜನೆ ಮತ್ತಿತರ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

## ಜೆಡಿಎಸ್ ಜಿಲ್ಲಾಧ್ಯಕ್ಷ ಹೆಚ್. ನಿಂಗಪ್ಪರಿಗೆ ನಾಳೆ ಅಭಿಮಾನಿಗಳಿಂದ ಅಭಿನಂದನೆ



ತುಮಕೂರು: ಜಾತ್ಯತೀತ ಜನತಾದಳದ ಜಿಲ್ಲಾಧ್ಯಕ್ಷರಾಗಿ ಇತ್ತೀಚೆಗೆ ನೇಮಕವಾಗಿರುವ ಮಾಜಿ ಶಾಸಕ ಹೆಚ್. ನಿಂಗಪ್ಪ ಅವರನ್ನು ಅವರ ಅಭಿಮಾನಿಗಳು ಈ ತಿಂಗಳ 25ರ ಬುಧವಾರ ಅಭಿನಂದಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಜೆಡಿಎಸ್ ಅಭಿಮಾನಿಗಳು, ಮಾಜಿ ಸಚಿವ ದಿ. ಲಕ್ಷ್ಮೀನರಸಿಂಹಯ್ಯ ಅಭಿಮಾನಿ ಬಳಗ ಹಾಗೂ ಹೆಚ್. ನಿಂಗಪ್ಪ ಅಭಿಮಾನಿಗಳಿಂದ ಅಂದು ಬೆಳಿಗ್ಗೆ 10.30ಕ್ಕೆ ನಗರದ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ನಗರಸಭೆ ಮಾಜಿ ಅಧ್ಯಕ್ಷ ಟಿ.ಹೆಚ್. ಜಯರಾಮ್ ತಿಳಿಸಿದ್ದಾರೆ.

ಮಾಜಿ ಶಾಸಕರು, ಸಜ್ಜನ ನಾಯಕರಾಗಿರುವ ಹೆಚ್. ನಿಂಗಪ್ಪ ಅವರ ಅಧ್ಯಕ್ಷತೆಯಲ್ಲಿ ಪಕ್ಷವನ್ನು ಮತ್ತಷ್ಟು ಸದೃಢವಾಗಿ ಸಂಘಟಿಸಲು, ಜಿಲ್ಲೆಯಲ್ಲಿ ಜೆಡಿಎಸ್ ಪ್ರಾಬಲ್ಯವನ್ನು ಮರುಸ್ಥಾಪಿಸಲು, ಮುಂಬರುವ ಚುನಾವಣೆಗಳಲ್ಲಿ ಜೆಡಿಎಸ್ ಅನ್ನು ಅಧಿಕಾರಕ್ಕೆ ತರಲು ಅಧ್ಯಕ್ಷರೊಂದಿಗೆ ಕೈಜೋಡಿಸಿ ಕೆಲಸ ಮಾಡುವುದಾಗಿ ಹೇಳಿದ್ದಾರೆ.

## ಸಿದ್ದಗಂಗಾ ಆಯಿಲ್ ಮಿಲ್‌ಗೆ ಕೇಂದ್ರ ಸಚಿವ ಸೋಮಣ್ಣ ಭೇಟಿ

ತುಮಕೂರು– ನಗರದ ಸಿದ್ದಗಂಗಾ ಆಯಿಲ್ ಮಿಲ್‌ನ ಗಾಣದ ಎಣ್ಣೆ ತಯಾರಿಕಾ ಘಟಕಕ್ಕೆ ಕೇಂದ್ರ ಸಚಿವ ವಿ. ಸೋಮಣ್ಣ ಭೇಟಿ ನೀಡಿ, ಅಲ್ಲಿನ ಕಾರ್ಯವೈಖರಿಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯ ಮಾಲೀಕರಾದ ಚಂದನ್ ಅವರ ಸೇವಾ ಮನೋಭಾವ ಹಾಗೂ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಎಣ್ಣೆಯನ್ನು ಕಡಿಮೆ ಬೆಲೆಗೆ ಒದಗಿಸುವ ಪ್ರಯತ್ನವನ್ನು ಅವರು ಪ್ರಶಂಸಿಸಿದರು.

ಜನಸಾಮಾನ್ಯರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಶುದ್ಧ ಮತ್ತು ಸುರಕ್ಷಿತ ಉತ್ಪನ್ನಗಳನ್ನು ನೀಡುವ ಉದ್ದೇಶದಿಂದ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹ ಎಂದು ಹೇಳಿದರು.

ಸಿದ್ದಗಂಗಾ ಆಯಿಲ್ ಮಿಲ್ನಲ್ಲಿ ಪ್ಲಾಸ್ಟಿಕ್ ಮುಕ್ತ ಎಣ್ಣೆ ವಿತರಣೆ ಮಾಡುವ ಪ್ರಯತ್ನವೂ ವಿಶೇಷವಾಗಿದೆ. ಪರಿಸರ ಸಂರಕ್ಷಣೆಯ ಜತೆಗೆ ಆರೋಗ್ಯಕರ ಜೀವನ ಶೈಲಿಗೆ ಉತ್ತೇಜನ ನೀಡುವ ದಿಟ್ಟ ಹೆಜ್ಜೆಯನ್ನು ಸಂಸ್ಥೆ ಇಟ್ಟಿದೆ. ಈ ಮಾದರಿ ಪ್ರಯತ್ನಗಳು ಇತರ ಉದ್ಯಮಿಗಳಿಗೆ ಸಹ ಪ್ರೇರಣೆಯಾಗಬಹುದು ಎಂದು ಅವರು ಅಭಿಪ್ರಾಯಪಟ್ಟರು.

ಚಂದನ್ ಅವರು ಸ್ಥಳೀಯವಾಗಿ ಬೆಳೆದ ಉತ್ತಮ ಗುಣಮಟ್ಟದ ಬೀಜಗಳಿಂದ ಎಣ್ಣೆ ತಯಾರಿಸಿ, ಗ್ರಾಹಕರಿಗೆ ನೈಸರ್ಗಿಕ ಮತ್ತು ಆರೋಗ್ಯಕರ ಉತ್ಪನ್ನವನ್ನು ಒದಗಿಸುತ್ತಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಬಳಸುವ ಸಾಂಪ್ರದಾಯಿಕ ವಿಧಾನಗಳನ್ನು ಅನುಸರಿಸಿ ತಯಾರಾಗುವ ಈ ಎಣ್ಣೆ, ವಿಶಿಷ್ಟ ರುಚಿ ಮತ್ತು ಗುಣಮಟ್ಟವನ್ನು ಹೊಂದಿದೆ. ಈ ಪ್ರಯತ್ನದಿಂದ ಸ್ಥಳೀಯ ಕೃಷಿಕರಿಗೆ ಸಹ ಬೆಂಬಲ ದೊರೆಯುತ್ತಿದೆ ಎಂದರು.

ಸ್ವತಃ ಈ ಎಣ್ಣೆಯನ್ನು ಖರೀದಿಸಿದ ಸಚಿವ ಸೋಮಣ್ಣ ಅವರು, ಸ್ಥಳೀಯ ಉತ್ಪನ್ನಗಳನ್ನು ಉತ್ತೇಜಿಸುವುದು ಮತ್ತು ಸಣ್ಣ ಉದ್ಯಮಗಳನ್ನು ಬೆಂಬಲಿಸುವುದು ಅತ್ಯಂತ ಅಗತ್ಯ ಎಂದು ಅವರು ಹೇಳಿದರು. ಇಂತಹ ಸಂಸ್ಥೆಗಳು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.

ಈ ಸಂದರ್ಭದಲ್ಲಿ ಪ್ರಸನ್ನ ಕುಮಾರ್, ಕೀರ್ತಿ, ಸೌಭಾಗ್ಯ ಮತ್ತಿತರರು ಉಪಸ್ಥಿತರಿದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.